ಶ್ರೀ ಸಿದ್ದರಾಮಯ್ಯ : ಅವರು ಮಾನ್ಯ ಯಡಿಯೂರಪ್ಪನವರು ಕರೆದಂತಹ ಬಿಫನ್‌ಗೆ ಹೋಗಿದ್ದರೆಂದು ಅವರನ್ನು ತೆಗೆದು ಹಾಕಿದ್ದೀರಾ? ಅವರು ಬರುತ್ತಾರಾ?

ಶ್ರೀ ಗೋವಿಂದ ಎಂ. ಕಾರಜೋಳ : ಇಲ್ಲ, ಅವರು ಬರುತ್ತಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮುಂದುಗಡೆ ಸೀಟಿನಲ್ಲಿ ಒಬ್ಬರೂ ಮಂತ್ರಿಗಳಿಲ್ಲ. ಈ ಸರ್ಕಾರ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಒಬ್ಬರೂ ಮಂತ್ರಿಗಳಿಲ್ಲ. ಮುಂದುಗಡೆ ಕುಳಿತುಕೊಳ್ಳುವವರು senior ministers, ಅವರೇ ಇರುವುದಿಲ್ಲ. ಅಲ್ಲಿ ನೋಡಿ.

9. <u>ನಿಯಮ ೬೯ ರ ಅಡಿಯಲ್ಲಿ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಚರ್ಚೆ</u>

ವಿಷಯ : ಕೃಷ್ಣಾ ಜಲವಿವಾದ ನ್ಯಾಯಾಧಿಕರಣ-೨ (ಬ್ರಿಜೇಶ್‌ಕುಮಾರ್ ಆಯೋಗ) ನೀಡಿರುವ ತೀರ್ಪಿನಂತೆ ನೀರು ಸಂಗ್ರಹಣೆ ಮಾಡಲು ಅನುಮತಿ ನೀಡಿದರೂ ಹಣ ಬಿಡುಗಡೆ ಮಾಡದೇ ಇರುವ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಪ್ರಸ್ತಾಪ ಮಾಡಿದಂತೆ ಇಡೀ ದೇಶದಲ್ಲಿ ಒಂದು ಅತ್ಯಂತ ಮಹತ್ವಾಕಾಂಕ್ಷಿಯ ೨ನೇ ದೊಡ್ಡ ಯೋಜನೆಯೆಂದು ನಾವೆಲ್ಲರೂ ಹೆಮ್ಮೆ ಪಟ್ಟುಕೊಂಡಿದ್ದೆವು. ಅದಕ್ಕೋಸ್ಕರವೇ, ಅಂದಿನ ಪ್ರಧಾನಮಂತ್ರಿಯವರಾಗಿದ್ದ ಸನ್ಮಾನ್ಯ ಲಾಲ್ ಬಹದ್ದೂರ್ ಶಾಸ್ತ್ರಿಗಳು ೧೯೬೫ರಲ್ಲಿ ಅಡಿಗಲ್ಲು ಹಾಕಿದರು. ನಾವು ಈಗಾಗಲೇ ೪೮ ವರ್ಷಗಳನ್ನು ಕಳೆದು ಬಿಟ್ಟಿದ್ದೇವೆ. ಈ ೪೮ ವರ್ಷಗಳಲ್ಲಿ ಶೇ.೫೦ರಷ್ಟು ಮಾತ್ರ ಕೆಲಸವಾಗಿದೆ, ಇನ್ನು ಶೇ.೫೦ರಷ್ಟು ಕೆಲಸ ಪ್ರಾರಂಭವಾಗಬೇಕಾಗಿದೆ. ೧೯೭೬ನೇ ಇಸವಿಯಲ್ಲಿ ಬಚಾವತ್ ತೀರ್ಪು ಬಂತು, ಅದರಡಿಯಲ್ಲಿ ೭೨೯ ಟಿ.ಎಂ.ಸಿ.ನೀರು ಅಲಾಟ್ ಆಯಿತು. ಇದರಲ್ಲಿ ನಾವು ಮೊದಲನೇ ಹಂತ, ಎರಡನೇ ಹಂತ ಎಂದು ಮಾಡಿ, ಇದನ್ನು "A" scheme ಕರೆಯುತ್ತೇವೆ. ಬಚಾವತ್ ತೀರ್ಪಿನಲ್ಲಿ ಇನ್ನೊಂದು ನ್ಯಾಯಾಧಿಕರಣವಾಗಬೇಕು, ಈ ನ್ಯಾಯಾಧಿಕರಣವಾದ

ಮೇಲೆ surplus water ಎಷ್ಟು ಉಳಿಯುತ್ತದೆ, ಅದನ್ನು ಹಂಚಿಕೆ ಮಾಡಬೇಕೆಂಬ ಬಗ್ಗೆ ಕೂಡ ಆಗಲೇ ತೀರ್ಮಾನವಾಗಿತ್ತು. ಅದು ಕೂಡ ೨೦೦೪ರಲ್ಲಿ ಬ್ರಿಜೇಶ್ ಕುಮಾರ್‌ರವರ Chairmanship ನಲ್ಲಿ ೨ನೇ ನ್ಯಾಯಾಧಿಕರಣ ರಚನೆಯಾಯಿತು. ಅವರು ದಿನಾಂಕ:೩೦.೧೨.೨೦೧೦-ರಲ್ಲಿ ೨ನೇ ನ್ಯಾಯಾಧೀಕರಣದ ಅವಾರ್ಡ್ ಅನ್ನು ಕೊಟ್ಟಿದ್ದಾರೆ. ಆ ಅವಾರ್ಡ್ ಪ್ರಕಾರ ನಮಗೆ ೧೭೭ ಟಿ.ಎಂ.ಸಿ. ನೀರು surplus water ನಲ್ಲಿ ಬಂದಿದೆಯೆಂದು ಹೇಳಿದ್ದಾರೆ. ನಾವು ಈ ೧೭೭ ಟಿ.ಎಂ.ಸಿ.ನೀರನ್ನು ಆದಷ್ಟು ಜಾಗ್ರತೆ ಬಳಸಿಕೊಂಡು, ಆ ನೀರನ್ನು ಆ ಭಾಗದ ರೈತರಿಗೆ ಕೊಡಬೇಕು. ಬಚಾವತ್ ತೀರ್ಪಿನ ಪ್ರಕಾರ ೭,೨೨,೦೦೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಕೊಡಬೇಕೆಂಬ ಉದ್ದೇಶವಿತ್ತು. ಬ್ರಿಜೇಶ್ ಕುಮಾರ್ ನ್ಯಾಯಾಧಿಕರಣದ ಪ್ರಕಾರ ಇದನ್ನು ನಾವು ೩ನೇ ಹಂತ ಎಂದು ಮಾಡಿಕೊಂಡಿದ್ದೇವೆ. ಇದರಲ್ಲಿ 5,30,000 ಹೆಕ್ಟೇರ್ ಪ್ರದೇಶಕ್ಕೆ ನೀರು ಕೊಡಬೇಕೆಂದರೆ, ಸುಮಾರು 11 ಲಕ್ಷ ಚಿಲ್ಲರೆ ಎಕರೆಯಾಗುತ್ತದೆ.

ಶ್ರೀ ವೀರಣ್ಣ ಚಂದ್ರಶೇಖರಯ್ಯ ಚರಂತಿಮಠ : ಮಾನ್ಯ ಅಧ್ಯಕ್ಷರೆ, ಹನ್ನೆರಡೂವರೆ ಲಕ್ಷ ಎಕರೆಯಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಹನ್ನೆರಡೂವರೆ ಲಕ್ಷವಾಗುತ್ತದೆಯೇ, ಆಯಿತು. ತಾವು ವ್ಯಾಪಾರಸ್ಥರು ಹಾಗಾಗಿ ಲೆಕ್ಕ ಚೆನ್ನಾಗಿ ಹೇಳುತ್ತೀರಿ. ನನಗೆ ಒಂದು ಹೆಕ್ಟೇರ್‌ಗೆ ಎರಡೂವರೆ ಎಕರೆ ಎಂದು ಗೊತ್ತು. ಹನ್ನೆರಡೂವರೆ ಲಕ್ಷ ಎಕರೆಯಾಗುತ್ತದೆ. ತಾವೆಲ್ಲಾ ಲೆಕ್ಕದಲ್ಲಿ ಬುದ್ಧಿವಂತರಾಗಿದ್ದೀರಿ.

ಶ್ರೀ ವೀರಣ್ಣ ಚಂದ್ರಶೇಖರಯ್ಯ ಚರಂತಿಮಠ : ತಾವು ಹಣಕಾಸಿನ ಮಂತ್ರಿಯಾಗಿದ್ದಂಥವರು.

ಶ್ರೀ ಸಿದ್ದರಾಮಯ್ಯ : ಆಗಲೂ ನಿಮ್ಮಂಥವರೊಬ್ಬರನ್ನು ಇಟ್ಟುಕೊಂಡಿದ್ದೆವು. ನಮಗೆ ಲೆಕ್ಕ ಅಷ್ಟೊಂದು ಬರುವುದಿಲ್ಲ, ಲೆಕ್ಕ ಬರುವುದಾಗಿದ್ದರೆ ನಾವು ಏಕೆ ಹೀಗೆ ಇರುತ್ತಿದ್ದೆವು. ನಾನು ಲೆಕ್ಕದಲ್ಲಿ ಅಷ್ಟೊಂದು strong ಆಗಿ ಇಲ್ಲ. ನಿಮ್ಮಂಥವರನ್ನು ಲೆಕ್ಕ ಹೇಳಿಕೊಡುವುದಕ್ಕೆ ಇಟ್ಟುಕೊಂಡಿದ್ದೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಬಹುಶ: ನೀವು ಅಲ್ಲಿಗೆ ಹೋದ ಮೇಲೆ ಲೆಕ್ಕವೆಲ್ಲಾ ತಪ್ಪಿದೆ.

ಶ್ರೀ ಸಿದ್ದರಾಮಯ್ಯ : ನಾವು ಇಷ್ಟು ಎಕರೆಗಳಿಗೆ ನೀರಾವರಿ ಮಾಡಬೇಕಾಗಿದೆ. ಈಗಾಗಲೇ ಇಲ ವರ್ಷಗಳನ್ನು ಕಳೆದು ಬಿಟ್ಟಿದ್ದೇವೆ. ಈಗ ಸರ್ಕಾರ ನಡೆಸುತ್ತಿರುವಂಥ ಮಂತ್ರಿಗಳು ಹಿಂದಿನವರೆಲ್ಲಾ ತಪ್ಪು ಮಾಡಿ ಬಿಟ್ಟಿದ್ದಾರೆ, ನಾವು ಏನು ಮಾಡುವುದೆಂದು ಹೇಳುತ್ತಾರೆ. ಮಾನ್ಯ ಗೋವಿಂದ ಕಾರಜೋಳರವರೆ ತಾವು ಇದನ್ನು ತಾನೇ ಹೇಳುವುದು, ನಿನ್ನೆ ದಿವಸ ಅದನ್ನೇ ಹೇಳುತ್ತಿದ್ದರು. ಹಿಂದೆ ನೀವೆಲ್ಲಾ ಅಧಿಕಾರದಲ್ಲಿದ್ದಿರಿ, ಅವರೆಲ್ಲಾ ಮಾಡಿದ್ದಾರೆಂದು ಹೇಳುತ್ತೀರಿ. Alright, ಅವರು ತಪ್ಪು ಮಾಡಿದ್ದಾರೆಂದು ಒಪ್ಪಿಕೊಂಡು ಬಿಡೋಣ, ಅವರು ನಿಮ್ಮಷ್ಟು fast ಆಗಿ ಮಾಡಲಿಲ್ಲವೆಂದು ಒಪ್ಪಿಕೊಂಡು ಬಿಡೋಣ. ತಾವು ಬಹಳ fast ಆಗಿದ್ದೀರಿ, ನಿಮ್ಮಷ್ಟು fast ಆಗಿ ಮಾಡಲಿಲ್ಲವೆಂದು admitting the fact, ಆದರೆ ನೀವು ಎಷ್ಟು fast ಆಗಿ ಮಾಡಿದ್ದೀರೆಂಬುದನ್ನು ನೋಡಬೇಕಲ್ಲವೇ? ನೀವು ನೀರಾವರಿಗೆ ಹಣವನ್ನು ಖರ್ಚು ಮಾಡಿದ್ದೀರಿ? ನಿಮ್ಮಲ್ಲಿ ಎಷ್ಟು ಬದ್ಧತೆ ಇತ್ತು, ಅದನ್ನು ಬಹಳ ವೇಗವಾಗಿ ಮುಗಿಸಬೇಕೆನ್ನುವಂಥದ್ದು, ನೀವು ಅವರನ್ನೇ ಹೇಳಿಕೊಂಡು ಕುಳಿತರೆ ಹೇಗೆ? ನೀವು ಮಾಡಲಿಲ್ಲ, ಅವರು ಮಾಡಲಿಲ್ಲವೆಂದು ಹೇಳಿಕೊಂಡು ನೆಪ ಹಾಕಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ? ಆಗ ಅಪ್ಪರ್ ಕೃಷ್ಣಾ ಡ್ಯಾಮ್ಸ್ ನಾನೇ ಮಾಡಿದ್ದು. ನಾನು ೧೯೯೪-೯೫ರಲ್ಲಿ ಹಣಕಾಸಿನ ಮಂತ್ರಿಯಾಗಿದ್ದಾಗ ಒಂದು resolution ಮಾಡಿ, ಅಪ್ಪರ್ ಕೃಷ್ಣಾ ಯೋಜನೆಗೆ ಒಂದು ಸಾವಿರ ಕೋಟಿ ರೂ.ಗಳನ್ನು ಪ್ರತಿ ವರ್ಷ ಖರ್ಚು ಮಾಡಬೇಕೆಂದು ಮಾಡಿದ್ದೆ. ಆಗ ತಾವು ನಮ್ಮ ಜೊತೆಯಲ್ಲಿ ಇದ್ದೀರಿ, ಮರೆತು ಬಿಟ್ಟಿದ್ದಿರಾ? ಆಗ ಮಾನ್ಯ ದೇವೇಗೌಡರು ನೀರಾವರಿ ಮಂತ್ರಿಗಳಾಗಿದ್ದರು. ಮಾನ್ಯ ರೇವಣ್ಣನವರೆ ಇದು ನಿಮಗೆ ಗೊತ್ತೆ?

ಶ್ರೀ ಹೆಚ್.ಡಿ.ರೇವಣ್ಣ : ಗೊತ್ತು, ತಾವು ಮಾತನಾಡಿ.

ಶ್ರೀ ಸಿದ್ದರಾಮಯ್ಯ : ನೋಡಿ, ಅವರು ಅದನ್ನೆಲ್ಲಾ ಹೇಳುವುದಿಲ್ಲ. ನಾನು ಹಣಕಾಸಿನ ಮಂತ್ರಿಯಾಗಿದ್ದಾಗ ಒಂದು resolution ಮಾಡಿದೆ. ಪ್ರತಿ ವರ್ಷ ಅಪ್ಪರ್ ಕೃಷ್ಣಾ ಒಂದಕ್ಕೆ, not Cauvery Basin ಒಂದು

ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಬೇಕೆಂದು ಮಾಡಿದೆ. ಒಂದು ಸಾವಿರ ಕೋಟಿ ರೂ.ಗಳನ್ನು ಅಪ್ಪರ್ ಕೃಷ್ಣಾ ಯೋಜನೆಗೆ every year ಖರ್ಚು ಮಾಡಬೇಕು. ಅದನ್ನು ಎಲ್ಲಿಂದಲಾದರೂ ತರಬೇಕು. ಕೃಷ್ಣಾ ಭಾಗ್ಯ ಜಲ ನಿಗಮದ ಮೂಲಕ ಹಣವನ್ನು ರೈಸ್ ಮಾಡಿ ಖರ್ಚು ಮಾಡಲೇ ಬೇಕೆನ್ನುವಂಥ ನಿರ್ಣಯವನ್ನು ಆಗ ತೆಗೆದುಕೊಳ್ಳಲಾಯಿತು. ಆದರೆ ಇವತ್ತು ಇಷ್ಟು ವರ್ಷಗಳಾದ ಮೇಲೂ ಕೂಡ ಮೊದಲನೇ ಹಂತ, ಎರಡನೇ ಹಂತ, "ಎ" ಸ್ಕೀಮ್‌ನಲ್ಲಿ ೬,೨೨,೦೦೦ ಹೆಕ್ಟೇರ್‌ಗೆ ತಾವು ನೀಡಿರುವ ಅಂಕಿ-ಅಂಶಗಳ ಪ್ರಕಾರ ಈಗ ತಾವು ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಕೊಟ್ಟಿರುವಂಥದ್ದು complete ಆಗಿದೆಯೆಂದು ಹೇಳುವಂಥದ್ದು ೬,೦೬,೦೦೦ ಹೆಕ್ಟೇರ್ ಇದೆ, ಇನ್ನು ಎ ಸ್ಕೀಮ್‌ನಲ್ಲಿ ೧೩,೦೦೦ ಹೆಕ್ಟೇರ್‌ಗೆ complete ಮಾಡಿಲ್ಲ. ಅದು ಇನ್ನೂ ಕೂಡ ಕುಂಟುತ್ತಾ ನಡೆಯುತ್ತಿದೆ. ಇದಕ್ಕೆ ಕಾರಣ ಏನೆಂದರೆ, ಮೊದಲನೆಯದಾಗಿ, ಇದಕ್ಕೆ ಸರಿಯಾಗಿ ಹಣವನ್ನು ಎಷ್ಟು ಒದಗಿಸಬೇಕಾಗಿತ್ತೋ ಅಷ್ಟು ಹಣವನ್ನು ಒದಗಿಸಲಿಲ್ಲ. ಎರಡನೆಯದಾಗಿ, time-bound programmeಗಳನ್ನು ಹಾಕಿಕೊಳ್ಳಲಿಲ್ಲ. ಹಾಗಾಗಿ ಇವತ್ತು escalation / ಬೆಲೆ ಏರಿಕೆಯಿಂದ ಬಹಳ ಹಣ ಖರ್ಚಾಗುತ್ತಿದೆ. ೬೩ ಕೋಟಿ ರೂ.ಗಳಿದ್ದದ್ದು, ಈಗ ಅದು ೨,೦೦೦ ಕೋಟಿ ರೂ.ಗಳಾಗಿದೆ. ನಮ್ಮ ವರುಣಾ ನಾಲೆ ೧೯೭೪-೭೫ರಲ್ಲಿ ಹದಿನೆಂಟೂವರೆ ಕೋಟಿ ರೂ. ಗಳಾಗಿತ್ತು, ಅದು ಮುಗಿಯುವ ಹೊತ್ತಿಗೆ ೫೦೦ ಕೋಟಿ ರೂ.ಗಳಾಯಿತು. ಇದು ಹದಿನೆಂಟೂವರೆ ಕೋಟಿ ರೂ. ಗಳಿಂದ ೫೦೦ ಕೋಟಿ ರೂ. ಗಳಾಯಿತು. ನಾವು ವಿಳಂಬ ಮಾಡುವುದರಿಂದ ರಾಜ್ಯದ ಮೇಲೆ ಹೊರೆಯಾಗುತ್ತದೆ.

ಇನ್ನೊಂದು ಕಡೆ ರೈತರಿಗೆ ನೀರು ಸಿಗುವುದು ಬಹಳ ವಿಳಂಬವಾಗುತ್ತದೆ. ಕಾಮೂ ಕಾದೂ ಅವರಿಗೆ ಕೂಡ ಬೇಸರವಾಗುತ್ತದೆ. ಬಿಜಾಪುರ, ಬಾಗಲಕೋಟೆ, ಗುಲ್ಬರ್ಗ, ಯಾದಗಿರಿ, ಕೊಪ್ಪಳ, ರಾಯಚೂರು, ಬಳ್ಳಾರಿ ಈ ಭಾಗಗಳಲ್ಲಿ ಯಾವಾಗಲೂ ಬರಗಾಲವಿರುತ್ತದೆ. ಅಲ್ಲಿ ಈಗಲೂ ಬರಗಾಲವಿದೆ. ಬೀದರ್‌ನಲ್ಲಿ ಕೂಡ ಬರಗಾಲವಿದೆ. ಅಪ್ಪರ್ ಕೃಷ್ಣಾ ನೀರು ಬೀದರ್ ಕಡೆ ಬರುವುದಿಲ್ಲ ಎಂದು ನಾನು ಅದನ್ನು ಹೇಳಲಿಲ್ಲ ಅಷ್ಟೇ. A-

Scheme ಯೋಜನೆಗಳನ್ನೂ ಇನ್ನೂ ಮುಗಿಸಿಲ್ಲ. ನಾವು ನೀರನ್ನು ನಿಲ್ಲಿಸಿಕೊಂಡಿದ್ದೇವೆ, ಜಲಾಶಯಗಳಲ್ಲಿ ನೀರಿದೆ. ಆದರೆ ಉಪ ನಾಲೆಗಳನ್ನೇ ತೋಡಲಿಲ್ಲ. Main channelಗಳನ್ನು ತೆಗೆಯುವುದು ಆದರೆ ಉಪ ನಾಲೆಗಳನ್ನು ತೆಗೆಯುವುದಿಲ್ಲ. ಹೀಗಾಗಿ ಅನೇಕ ಕಡೆ ನಾವು ಶೇಖರಣೆ ಮಾಡಿಕೊಂಡಂಥ ನೀರನ್ನು ಕೂಡ ಬಳಸಿಕೊಳ್ಳಲು ಆಗಲಿಲ್ಲ. ಹಾಗಾಗಿ ರೈತರಿಗೆ ಇದರ ಉಪಯೋಗ ಎಷ್ಟು ಆಗಬೇಕಾಗಿತ್ತೋ ಅಷ್ಟು ಆಗಲಿಲ್ಲ. ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುವುದೇನೆಂದರೆ A-Schemeನಲ್ಲಿ ಬಾಕಿ ಯೋಜನೆಗಳು ಯಾವ್ಯಾವಿವೆ, ಅವೆಲ್ಲವನ್ನೂ ಈ ವರ್ಷದಲ್ಲಿ ಅಂದರೆ ೨೦೧೨-೧೩ರಲ್ಲಿ ಪೂರ್ಣ ಮುಗಿಸುವಂಥ ಕೆಲಸ ಮಾಡಬೇಕು. ಅದಕ್ಕೆ ಆದ್ಯತೆ ಮೇಲೆ ಹಣ ಒದಗಿಸಿ ಉಳಿದಿರುವ ಎಲ್ಲಾ ಕೆಲಸಗಳನ್ನು ಕೂಡಾ ಮಾಡಬೇಕು. ಬ್ರಿಜೇಶ್ ಕುಮಾರ್‌ರವರ ಅವಾರ್ಡ್ ಆಗಿ, ನ್ಯಾಯಾಧಿಕರಣದ ತೀರ್ಪು ದಿನಾಂಕ ೩೦-೧೨-೨೦೧೦ರಂದು ಬಂದಿದ್ದು, ಇನ್ನು ೨೦ ದಿನಗಳಾದರೆ ಎರಡು ವರ್ಷಗಳಾಗುತ್ತದೆ. ತೀರ್ಪು ಬಂದು ಎರಡು ವರ್ಷಗಳಾಗಿದೆ ಎಂದು ನಿನ್ನೆ ಹೇಳಿದಾಗ, ನೀವು ಮಾಡಿಲ್ಲವೇ ಎಂದು ಕಾರಜೋಳ್‌ರವರು ಹೇಳಿದರು. ಬರೀ ಟೆಂಡರ್ ಕರೆಯುವುದಕ್ಕೇ ನಿಮಗೆ ಎರಡು ವರ್ಷ ಬೇಕೇ? ಇದರಲ್ಲಿ ೯ ಉಪ ಯೋಜನೆಗಳಿವೆ. ಸುಮಾರು ೨ ಲಕ್ಷದ ೨೭ ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರು ಕೊಡತಕ್ಕಂಥ ಮುಳವಾಡ ಏತ ನೀರಾವರಿ ಯೋಜನೆಯು ಉಪ ಯೋಜನೆಗಳಲ್ಲೇ ದೊಡ್ಡದಾದ ಉಪ ಯೋಜನೆಯಾಗಿದೆ ಆ ಯೋಜನೆಯ head workಗೆ ೩-೪ ತಿಂಗಳ ಹಿಂದೆ ಅಡಿಗಲ್ಲು ಹಾಕಿದ್ದಾರೆ. ಅದು ೬೫೦ ಕೋಟಿ ರೂಪಾಯಿಗಳ ಯೋಜನೆ ಎಂದು ಹೇಳಿದ್ದಾರೆ. ಇಡೀ ಮೂರನೇ ಹಂತ ಮುಗಿಸಲು ೧೭,೨೦೭ ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ನವೆಂಬರ್ ೨೦೧೧ರಲ್ಲಿ ತೀರ್ಮಾನ ಮಾಡಿದ್ದಾರೆ. phased mannerನಲ್ಲಿ ಆ ೧೭,೨೦೭ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತೇವೆ ಎಂದು ಹೇಳಿದ್ದಾರೆ. ಈ ವಿಚಾರ ಹಿಂದೆ ಒಂದು ಸಾರಿ ಇಲ್ಲಿ ಚರ್ಚೆಯಾಯಿತು, ಎಂ.ಬಿ.ಪಾಟೀಲ್‌ರವರು ಅದನ್ನು ಪ್ರಸ್ತಾಪ ಮಾಡಿದ್ದರು. ನಾನೂ ಕೂಡ ಅದರ ಬಗ್ಗೆ ಮಾತನಾಡಿದ್ದೆ. ಇದರ ಬಗ್ಗೆ ಚರ್ಚೆ ಮಾಡಲು ನಮ್ಮನ್ನು all-party meetingಗೆ ಕೂಡ ಕರೆದಿದ್ದರು. ನಾನು ಅಲ್ಲೂ

ಹೇಳಿದ್ದೆ, ಇಲ್ಲೂ ಹೇಳಿದ್ದೆ, ಈಗಲೂ ಹೇಳುತ್ತೇನೆ, ೭ ವರ್ಷಗ ಳವರೆಗೆ ಏಕೆ ಕಾಯ್ದುಕೊಂಡು ಕುಳಿತುಕೊಳ್ಳುತ್ತೀರಿ? Why do you want ೭ years? ಇದನ್ನು ೫ ವರ್ಷಗಳಲ್ಲಿ ಮುಗಿಸಲು ಕಾರ್ಯಕ್ರಮಗ ಳನ್ನು ಹಾಕಿಕೊಳ್ಳಿ. ಪ್ರತಿವರ್ಷ ೧೦ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ. ೧೦ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ತೊಂದರೆ ಏನಿದೆ? What is the plan size this year? It is about Rs. ೩೮,೦೦೦ crore for the year ೨೦೧೨-೧೩. ಅದರಲ್ಲಿ ೨೫% ಎಷ್ಟಾಗುತ್ತದೆ? ಅಷ್ಟನ್ನು ಪ್ರತಿವರ್ಷ ಖರ್ಚು ಮಾಡಿ. ಹಿಂದೆ ಎಸ್.ಎಂ.ಕೃಷ್ಣರವರ ಕಾಲದಲ್ಲಿ plan sizeನಲ್ಲಿ ೩೧%ಅನ್ನು ಇದಕ್ಕಾಗಿ ಇಟ್ಟಿದ್ದರು. ಆಮೇಲೆ ನಾನು ಹಣಕಾಸಿನ ಮಂತ್ರಿಯಾಗಿದ್ದಾಗ ೨೦೦೪-೦೫ ಮತ್ತು ೨೦೦೫-೦೬ರಲ್ಲಿ ೨೯% ಇಟ್ಟಿದ್ದೆನು. ನೀವು ಅಧಿಕಾರಕ್ಕೆ ಬಂದ ಮೇಲೆ ೨೯-೩೦% ಇದ್ದುದ್ದನ್ನು ಹದಿಮೂರೂವರೆ ಪರ್ಸೆಂಟ್‌ಗೆ ಇಳಿಸಿದಿರಿ. ಏಕೆ ಇಳಿಸಿದಿರಿ? ನೀರಾವರಿಗೆ ನಮ್ಮ ಆದ್ಯತೆ ಎಂದು ಹೇಳುತ್ತೀರಿ. ೩೦%ಗೂ ೧೩.೫% ಗೂ ಎಲ್ಲಿಯ ಹೋಲಿಕೆ? ಹಾಗಿದ್ದರೆ ನಿಮ್ಮ ಆದ್ಯತೆ ಏನು? ಎಲ್ಲಿದೆ ನಿಮ್ಮ ಆದ್ಯತೆ? ಒಂದು ಲಕ್ಷ ಕೋಟಿ ರೂಪಾಯಿಗಳ ಬಜೆಟ್‌ಅನ್ನು ಮಂಡಿಸಿದ್ದೇವೆ ಎಂದು ಪದೇಪದೇ ಹೇಳುತ್ತೀರಿ. Then why you have not allocated in accordance with the growth of the budget, in accordance with the growth of the plan size? ಹಾಗೆಯೇ ಮಾಡಬೇಕಲ್ಲವೇ? ನೀವು ಪ್ರತಿವರ್ಷ ೨೫% ಮಾಡಿಕೊಂಡು ಬಂದಿದ್ದರೂ ಕೂಡ, ಇಷ್ಟು ಹೊತ್ತಿಗೆ ಸುಮಾರು ಕೆಲಸ ಮುಗಿದು ಹೋಗು-ತ್ತಿತ್ತು. ಆ ಭಾಗದ ಜನರು ಸಂತೋಷ ಪಡುತ್ತಿದ್ದರು, ಆ ಭಾಗದ ಎಂ.ಎಲ್.ಎ.ಗಳು ಸಂತೋಷ ಪಡುತ್ತಿದ್ದರು. ಅದನ್ನು ಮಾಡದೇ, ಹದಿಮೂರೂವರೆ ಪರ್ಸೆಂಟ್‌ಗೆ ಇಳಿಸಿದಿರಿ. Is it your priority? ೨೯% ನಿಂದ ೧೩.೫%ಗೆ ಇಳಿಸಿಬಿಟ್ಟು, can you call irrigation as a priority area? Chief Minister ದುಡ್ಡು ಕೊಡದಿದ್ದರೆ ಪಾಪ ಬಸವರಾಜ ಬೊಮ್ಮಾಯಿಯವರು ಏನು ಮಾಡುತ್ತಾರೆ? ಜಾಸ್ತಿ ದುಡ್ಡು ಕೊಡಬೇಕೆಂದು ನಾವು ಅನೇಕ ಸಾರಿ ಹೇಳಿದೆವು. ೨೯% ದುಡ್ಡು

ಕೊಡದಿದ್ದರೆ ನನಗೆ ಈ ಇಲಾಖೆ ಬೇಡ ಎಂದು ಹೇಳಿ ಎಂದು ನಾನು ಬಸವರಾಜ ಬೊಮ್ಮಾಯಿಯವರಿಗೆ ಹೇಳಿದ್ದೆ. ಅವರೂ ಸಹ ಪ್ರಯತ್ನ ಮಾಡಿರಬಹುದು ಎಂದು ಕಾಣುತ್ತದೆ. ಆದರೆ ಅವರು ಗುಡ್ಡು ಕೊಟ್ಟಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : Planningನಲ್ಲಿ sectorial allocation ಬಗ್ಗೆ ಬಹಳ ಉತ್ತಮವಾದಂಥ debate start ಮಾಡಿದ್ದೀರಿ. ನಮ್ಮ ಒಟ್ಟಾರೆ ಪ್ಲ್ಯಾನಿಂಗ್‌ನಲ್ಲಿ ಯಾವಯಾವ priority ಯಾವಯಾವ decadeನಲ್ಲಿ ಏನೇನಿರಬೇಕು ಎನ್ನುವ ದೃಷ್ಟಿಯಿಂದ ಮಾಡುತ್ತೇವೆ. ನೀವೂ ಕೂಡ Planning Minister ಆಗಿ ೫-೬ ವರ್ಷ ಕೆಲಸ ಮಾಡಿದ್ದೀರಿ, Finance Minister ಆಗಿ ಕೆಲಸ ಮಾಡಿದ್ದೀರಿ. ಇಲ್ಲಿ ನಾವು ಎರಡು ಅಂಶಗಳನ್ನು ನೋಡಬೇಕು. ಅದು World Bank ಇರಬಹುದು, ಇನ್ನೊಂದು ಇರಬಹುದು. Absolute figures ಬೇರೆ, statistical figures ಬೇರೆ. Percentage of what? That is important., ೧೦೦ಕ್ಕೆ ೨೫% ಆದರೆ, ಅದೇ ಸಾವಿರಕ್ಕೆ ೨.೫% ಆಗುತ್ತದೆ. ಈ ಹಿನ್ನೆಲೆಯಲ್ಲಿ ನಾವು ಮಾತನಾಡಬೇಕಾಗುತ್ತದೆ. ನಾವು ಉತ್ತರ ಕೊಡುವಾಗ details ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ : It is very simple mathematics. I got your point. ನೀವು ಹೇಳುವುದೇನೆಂದರೆ, ೧೦೦ಕ್ಕೆ ೨೫% ಎಂದರೆ ೨೫ ರೂಪಾಯಿ ಆಗುತ್ತದೆ. ಅದೇ ಒಂದು ಸಾವಿರ ರೂಪಾಯಿ- ಗಾದರೆ ೨೫೦ ರೂಪಾಯಿ ಆಗುತ್ತದೆ ಎಂದು ಹೇಳುತ್ತಿದ್ದಾರೆ. ಆಗ ಒಂದೇ ಸಲಕ್ಕೆ ೨೫ ಕೋಟಿ ಇದ್ದದ್ದು ೨೫೦ ಕೋಟಿ ರೂಪಾಯಿಗೆ ಹೋಗುತ್ತದೆ, ಹಾಗೆ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ. But the growth of the budget is also there. You must also understand that. The growth of the plan size is there. ಹಿಂದೆ plan size ೧೦೦೦-೧೧,೦೦೦ ಕೋಟಿ ಇತ್ತು. Today what is the plan size? It is about Rs. ೩೮,೦೦೦ crore. ಹಾಗಿರುವಾಗ, ಒಂದು ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಮಂಡಿಸಿದ್ದೇವೆ ಎಂದು ಏಕೆ ಜಂಭ ಹೊಡೆದುಕೊಂಡಿರಿ? ಅದರ ಪ್ರಕಾರವೇ ಅದೂ ಸಹ ಬೆಳೆಯಬೇಕು.

ಬರೀ plan size ಬೆಳೆಯದೆ allocation ಮಾತ್ರ ಬೆಳೆಯಲಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. plan size ಜೊತೆಗೆallocation ಕೂಡ ಬೆಳೆಯಬೇಕು. ಅದನ್ನು ಇವರು ಮಾಡಲಿಲ್ಲ. ಇವರು 13.5% ಗಿಂತ ಮೇಲೆ ಹೋಗುವುದೇ ಇಲ್ಲ. ಈಗಲೂ 13.5% ಇದ್ದಾರೆ. ಅದನ್ನು ಒಂದು ಅಳತೆಗೋಲಾಗಿ ಇಟ್ಟುಕೊಂಡುಬಿಟ್ಟಿದ್ದಾರೆ. 13.5%, 13%, 14%ಒಳಗೇ ಇರಬೇಕೆಂದು ಇಟ್ಟುಕೊಂಡುಬಿಟ್ಟಿದ್ದಾರೆ. ಆದರೂ ನೀರಾವರಿ ಇವರ ಆದ್ಯತೆ ಎಂದು ಹೇಳುತ್ತಾರೆ. ನಾನು ಈಗಲೂ ಕೂಡ ನಿಮಗೆ ಒತ್ತಾಯ ಮಾಡುತ್ತೇನೆ, we all co-operate.ನಿಮ್ಮ ಮೂರನೇ ಹಂತ ಮುಗಿಯಬೇಕಾದರೆ 25 ಸಾವಿರದಿಂದ 30 ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ, not 17 thousand crores of rupees.ನೀವು 2011–12ಕ್ಕೆ ಲೆಕ್ಕಾಚಾರ ಹಾಕಿಕೊಂಡಿದ್ದೀರಿ. 17207 ಕೋಟಿ ರೂ. ಎಂದು ಅಂದಿನ ಬೆಲೆಗಳ ಆಧಾರದ ಮೇಲೆ ಲೆಕ್ಕಾಚಾರ ಹಾಕಿಕೊಂಡಿದ್ದೀರಿ. 3ನೇ ಹಂತ ಮುಗಿಯುತ್ತಿದ್ದ ಹಾಗೆಯೇ it will be more than 25 thousand to 30 thousand crores of rupees. ನಾನು ಅದಕ್ಕೇ ಹೇಳುತ್ತಿದ್ದೇನೆ. You set up all and take a decision. Every year whatever may be the plan size or the budget, you will allocate 10 thousand crores of rupees for irrigation ಎಂದು ಮಾಡಿ. ಆಂಧ್ರದಲ್ಲಿ ನೀರಾವರಿಗೆ ಇಟ್ಟ ಹಣ ಎಷ್ಟು ಎಂದು ನಿಮಗೆಲ್ಲ ಗೊತ್ತಿರಬಹುದು. You are also aware of it. ಅಲ್ಲಿಯ ಮುಖ್ಯಮಂತ್ರಿಯಾಗಿದ್ದಂಥ ರಾಜಶೇಖರ ರೆಡ್ಡಿಯವರು ಈಗ ಇಲ್ಲ. ದಿವಂಗತರಾಗಿದ್ದಾರೆ. ರಾಜಶೇಖರ ರೆಡ್ಡಿಯವರು 5 ವರ್ಷಗಳಲ್ಲಿ ಹಣ ಇಟ್ಟು ನೀರಾವರಿಗೋಸ್ಕರ ಎಲ್ಲವನ್ನೂ ಮಾಡಿ ಮುಗಿಸಿದರು. ನಾನು ಅದರ ಉದಾಹರಣೆ ಹೇಳಿದೆ.

ಶ್ರೀ ಬಸವರಾಜ ಬೊಮ್ಮಾಯಿ : ಮಾತನಾಡಬಾರದೆಂದೇನೂ ಇಲ್ಲ. ಇಡೀ ದೇಶದ ಬಗ್ಗೆ ಮಾತನಾಡುವಾಗ ಬೇರೆ ರಾಜ್ಯದ ಬಗ್ಗೆ ಮಾತನಾಡಬಾರದೆಂದೇನೂ ಇಲ್ಲ. ಬೇರೆ ರಾಜ್ಯದಲ್ಲಿ ಒಳ್ಳೆಯ ಕೆಲಸ ಮಾಡಿದ್ದರೆ ಅದನ್ನು ನಾವು ಅನುಸರಿಸುವುದು ತಪ್ಪಿಲ್ಲ. ಅದರಲ್ಲಿ ನಮ್ಮ ಘನತೆ ಏನೂ ಕಡಿಮೆಯಾಗುವುದಿಲ್ಲ. ರಾಜಶೇಖರ ರೆಡ್ಡಿಯವರು 1ಲಕ್ಷ

ಕೋಟಿ ರೂಪಾಯಿಗಳ ಜಲ ಯಜ್ಞ ಯೋಜನೆಯನ್ನು ಮಾಡಿದರು. ಪ್ರತಿ ವರ್ಷ ಅವರು 20 ಸಾವಿರ ಕೋಟಿ ರೂಪಾಯಿಗಳನ್ನು 5 ವರ್ಷಗಳಲ್ಲಿ ಕೊಡುತ್ತೇವೆಂದು ಹೇಳಿ ಒಂದು ಲಕ್ಷ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ರೂಪಿಸಿದ್ದರು. ಆದರೆ ಮುಂಚೆ ಬಜೆಟ್ provision ಎಷ್ಟಿತ್ತು? ಎಷ್ಟು ಖರ್ಚಾಯಿತು? ಈಗಿರುವಂಥ ಪರಿಸ್ಥಿತಿ ಏನಿದೆ? ಅದರ ಬಗ್ಗೆ ಈ ಸದನದಲ್ಲಿ ನಾವು ಚರ್ಚೆ ಮಾಡುವುದು ಸೂಕ್ತವಲ್ಲ. ಅವರ ದಿಟ್ಟತನವನ್ನು ನಾನು ಒಪ್ಪುತ್ತೇನೆ. ನಾನು ಹಣಕಾಸು ಇಲಾಖೆಗೆ 3–4 ಸಾರಿ ಪತ್ರ ಬರೆದಿದ್ದೇನೆ. ತಾವು ಹಣಕಾಸು ಇಲಾಖೆಯನ್ನು ನಿಭಾಯಿಸಿದ್ದೀರಿ. ತಮಗೆ ಗೊತ್ತಿರುವ ಹಾಗೆ, ಇವತ್ತು ನಾವು ಹಣಕಾಸು ಇಲಾಖೆಗೆ ಯಾವುದಾದರೂ project ಅನ್ನು ಕಳುಹಿಸಿದರೆ, ಉದಾಹರಣೆಗೆ, UKP stage-3 ಅನ್ನು ನಾವು ಅಲ್ಲಿಗೆ ಕಳುಹಿಸಿದ ಸಂದರ್ಭದಲ್ಲಿ ದೊಡ್ಡ debate ಆಯಿತು. 17 ಸಾವಿರ ಕೋಟಿ ರೂ.ಗಳ project ಇದೆ, ಇದು 7 ವರ್ಷಗಳ project ಆಗಿದ್ದರೂ ಕೂಡ ಪ್ರತಿ ವರ್ಷ ಇಷ್ಟು ಖರ್ಚು ಬರುತ್ತದೆ, ನಮ್ಮ other priorties ಇಷ್ಟಿವೆ, irrigation ನಲ್ಲಿಯೇ ಬೇರೆ ಕೆಲಸ ಇಷ್ಟಿದೆ, ಇರುವ ಯೋಜನೆಗಳಿಗೆ ಏನು ಕೊಡಬಹುದು ಹೀಗೆ, ಸುಮಾರು 8–10 ಪ್ರಶ್ನಾವಳಿಗಳನ್ನು ಅವರು ಕೊಟ್ಟರು. ನಾನು ಬಹಳ ಸ್ಪಷ್ಟವಾಗಿ ಅವರಿಗೆ ಹೇಳಿದ್ದೇನೆ. ಬೇರೆ ಯೋಜನೆಗಳ ತರಹ, ಬೇರೆ ಕಾರ್ಯಕ್ರಮಗಳ ತರಹ ಇದನ್ನು treat ಮಾಡಬೇಡಿ. Do not treat it like any other programme, this is a project .3 ಸಾವಿರ ಕೋಟಿ ರೂಪಾಯಿಗಳ ಯೋಜನೆ ಇದ್ದರೂ clearance ಕೊಡುವುದಕ್ಕೆ ಹಿಂದೆಮುಂದೆ ನೋಡುವುದಿಲ್ಲ. ನೀವು clearance ಕೊಡಿ. ಆಮೇಲೆ provision as per the project area ಎಂದು ನಾವೇನು spread over ಮಾಡುತ್ತೇವೆ, ಆ spread over ಪ್ರಕಾರ ಬಜೆಟ್ provision ಮಾಡಿ. ನೀವು clearance ಕೊಡುವುದಕ್ಕೆ ತೊಂದರೆ ಮಾಡಿದರೆ planning ಇಲಾಖೆಯವರು ನಿಮ್ಮ allocation ಇಷ್ಟಿಲ್ಲ, ಇದನ್ನು next year ತ್ರೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಅದರ ಆಧಾರದ ಮೇಲೆ finance ನವರು noting ಮಾಡುತ್ತಾರೆ. Cabinetನಲ್ಲಿ over-rule ಮಾಡುವುದು ಅದು ಬೇರೆ ವಿಚಾರ. ಆದರೆ, approach towards the irrigation projects, approach

towards the power projects, the approach should change. ನಮ್ಮ planning approach change ಆಗಬೇಕಾಗಿದೆ. ನಮ್ಮ ಹಣಕಾಸಿನ ನಿಲುವು ಕೂಡ change ಆಗಬೇಕಾದಂಥದ್ದು ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದು ಎಂದು ನಾನು ಹೇಳಬಯಸುತ್ತೇನೆ. ಇಲ್ಲದೇ ಹೋದರೆ, ಕೇವಲ ನಮ್ಮ compartmentalization ನೋಡುವ ದೃಷ್ಟಿ ಮಾಡಿದರೆ ಈ ವರ್ಷ ಬಜೆಟ್‌ಗೆ ಇಷ್ಟಿದೆ, ನಿಮಗೆ 5 ಸಾವಿರ, 7 ಸಾವಿರ 8 ಸಾವಿರ ಕೋಟಿ ರೂ. ಬಜೆಟ್ ಇದೆ, ಅದರಲ್ಲಿ ಈಗಾಗಲೇ programme ಹಾಕಿಕೊಂಡಿದ್ದೀರಿ, ಈ project ಗೆ ನಾವು clearance ಕೊಡುವುದಿಲ್ಲ ಎನ್ನುತ್ತಾರೆ. ನಾವೇನು ಹೇಳುವುದು ಎಂದರೆ, ಈ project clear ಆದಮೇಲೆ ಅದಕ್ಕೆ land acquisition ಇದೆ environmental clearance ,ಇದೆ, technical clearance ಇದೆ, hydrology clearance ಇದೆ. ಅವೆಲ್ಲವನ್ನೂ ಮಾಡುವ ಸಂರ್ಭದಲ್ಲಿ ಹಣಕಾಸು ಖರ್ಚಾಗುವುದಿಲ್ಲ. ಮುಂದಿನ ದಿನಗಳಲ್ಲಿ ಹಣಕಾಸು ಬೇಕಾಗುತ್ತದೆ. At least administrative sanction ಕೊಡದೇ ಮುಂದೆ ಹೇಗೆ ಹೋಗುವುದು? Administrative sanction ಕೊಟ್ಟರೆ ತಾನೆ ಇವೆಲ್ಲಾ clearance ಆಗಿ ಮುಂದುವರಿಸುವುದಕ್ಕೆ ಸಾಧ್ಯ. ಉದಾಹರಣೆಗೆ, AIBP ಯಿಂದ ನಾವು Government of India ದಿಂದ ಹಣ ತರುತ್ತೇವೆ. ಅವರು administrative sanction ಕೇಳುತ್ತಾರೆ. ನಾವು ಮೊನ್ನೆ 3 project ಗಳಿಗೆ AIBP sanction ಅನ್ನು ತೆಗೆದುಕೊಂಡಿದ್ದೇವೆ. ಅದಕ್ಕೆ ಅವರು administrative sanction ಹೇಗೆ ಕೊಡುವುದು? ನೀವು administrative sanction ಕೊಟ್ಟರೆ ತಾನೆ ಅವರೂ ಕೂಡ sanction ಮಾಡುವುದು. ನಮ್ಮ ರಾಜ್ಯದವರೇ ಒಪ್ಪಿಕೊಳ್ಳದಿದ್ದರೆ ಕೇಂದ್ರ ಹೇಗೆ ಒಪ್ಪಿಕೊಳ್ಳುವುದಕ್ಕೆ ಸಾಧ್ಯ? ಆ ನಟ್ಟಿನಲ್ಲಿ ಇವತ್ತು ಬಹಳಷ್ಟು ವಿಚಾರಗಳನ್ನು ಹಣಕಾಸು ಇಲಾಖೆ ಜೊತೆ ಮಾತನಾಡಿದಮೇಲೆ ಈಗ streamline ಆಗಿದೆ. ಈಗ UKP stage-3 clear ಮಾಡಬೇಕಾದರೆ ಬಹಳಷ್ಟು ಚರ್ಚೆಯಾಗಿ streamline ಆಗಿದೆ. ಮೊದಲಿನ ತರಹ ಯಾವ query ಹಾಕುತ್ತಿದ್ದರು ಆ queries ಇವತ್ತು ಕಡಿಮೆಯಾಗುತ್ತಿವೆ.

ಶ್ರೀ ಸಿದ್ದರಾಮಯ್ಯ : I am not finding fault, ನಾನೇನು ಹೇಳುತ್ತಿದ್ದೇನೆಂದರೆ, ನಿಮ್ಮ priority ನೀರಾವರಿ ಆಗಲಿಲ್ಲ. ಆಗಿದ್ದಿದ್ದರೆ, ನೀವು ಇನ್ನೂಹೆಚ್ಚು ಹಣ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು, ಇನ್ನೂ ವೇಗವಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತಿತ್ತು. ಅದನ್ನು ಮಾಡಲಿಲ್ಲವೆನ್ನುವುದು ನನ್ನ ಮಾತುಗಳು. ನೀವು ಅಧಿಕಾರಕ್ಕೆ ಬಂದು ನಾಲ್ಕೂವರೆ ವರ್ಷಗಳಾಯಿತು. ನೀವು ಬೇಕು ಎನ್ನುವುದಾದರೆ, ಯಾವ್ಯಾವ ವರ್ಷ ಎಷ್ಟೆಷ್ಟು allocate ಮಾಡಿದ್ದೀರಿ, ಎಷ್ಟೆಷ್ಟು ಹಣ ಬಿಡುಗಡೆಯಾಗಿದೆ, ಖರ್ಚಾಗಿದೆ ಎನ್ನುವ ಲೆಕ್ಕ ಕೊಡುತ್ತೇನೆ. ನೀರಾವರಿಗೆ ಎಷ್ಟು ಹಣ ಇಟ್ಟಿದ್ದೀರಿ? Allocation ಎಷ್ಟು? Release & expenditure ಎಷ್ಟು?ಎಂದರೆ ಬಹಳ ಕಡಿಮೆಯಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ : ಅದನ್ನು ಸರಿ ಮಾಡಬೇಕೆಂಬ ಬಗ್ಗೆ ಸರಿಯಾದ ಮಾಹಿತಿಯನ್ನು ನಾನು ನನ್ನ ಉತ್ತರದಲ್ಲಿ ಕೊಡುತ್ತೇನೆ. ನೀವು ಕೊಟ್ಟಿರುವುದು ಒಂದು ಭಾಗ. ಆಮೇಲೆ ನಿಜವಾಗಿ ಆಗಿರುವಂಥದ್ದು, ಕೆಲಸ ಎಷ್ಟಾಗಿದೆ, ಎಷ್ಟು ಹಣ ಖರ್ಚಾಗಿದೆ ಎನ್ನುವ ವಾಸ್ತವಾಂಶವನ್ನು ನಾನು ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ನಿಮ್ಮಲ್ಲಿ ಏನು ಮಾಡುತ್ತಾರೆಂದರೆ; budget allocation ಮಾಡುತ್ತಾರೆ, ಆಮೇಲೆ revised budget ಮಾಡುತ್ತಾರೆ. ಆಮೇಲೆ release, ಆಮೇಲೆ expenditure ಮಾಡುತ್ತಾರೆ. Allocation ಬೇರೆ ಇರುತ್ತದೆ, ಆಮೇಲೆ revise ಆಗಿ ಕಡಿಮೆಯಾಗುತ್ತದೆ. ಆಮೇಲೆ release ಮಾಡುತ್ತೀರಿ. ಆ release ದ್ದೂ ಮತ್ತೆ ಕಡಿಮೆಯಾಗುತ್ತದೆ. ಆಮೇಲೆ ಮತ್ತು expenditure ಇನ್ನೂ ಕಡಿಮೆ ಮಾಡುತ್ತೀರಿ. 24,724 ಕೋಟಿ ರೂಪಾಯಿಗಳನ್ನು ಕಳೆದ 5 ವರ್ಷಗಳ ಬಜೆಟ್‌ನಲ್ಲಿ ಅಲೋಕೇಟ್ ಮಾಡಿದ್ದೀರಿ. Release ಮಾಡಿರುವುದು 18,198 ಕೋಟಿ ರೂಪಾಯಿಗಳು. ಖರ್ಚಾದದ್ದು 15,979 ಕೋಟಿ ರೂಪಾಯಿಗಳು. ಅಂದರೆ, allocation ಗೂ ಖರ್ಚಾದದ್ದಕ್ಕೂ nearly more than 9,000 crores of rupees difference is there, ಖರ್ಚು ಮಾಡಲಿಲ್ಲ. ನಾವು ಅಲೋಕೇಟ್ ಮಾಡಿದ್ದರಲ್ಲಿ 5, 10% ಹಣವನ್ನು ಖರ್ಚು ಮಾಡುವುದಕ್ಕಾಗದಿರಬಹುದು.

ಆಗ ಆ ಸಾಧ್ಯತೆಗಳಿರುತ್ತವೆ. Because these are all human errors. ಸಾಕಷ್ಟು ತೊಂದರೆಗಳಿರುತ್ತವೆ. ಇದೆಲ್ಲ ಆಗುತ್ತದೆ. ಆದರೆ, ನಾನೇನು ಹೇಳುತ್ತೇನೆಂದರೆ, ಇದೊಂದು ಆದ್ಯತೆಯ ಕಾರ್ಯಕ್ರಮವನ್ನಾಗಿ ಸರ್ಕಾರ ಪರಿಗಣಿಸಬೇಕು. ಪರಿಗಣಿಸಿ, ಪ್ರತಿ ವರ್ಷ 10 ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಡಿ. ಇದಕ್ಕೆ ನಮ್ಮ ಇಡೀ ಸದನದ ಸಹಕಾರವಿದೆ ಎಂದು ನಾನು ಅಂದುಕೊಂಡಿದ್ದೇನೆ. ಜೆಡಿ (ಎಸ್) ನವರದೂ ಪೂರ್ಣ ಸಹಕಾರವಿದೆ. ನಮ್ಮ ವಿರೋಧ ಪಕ್ಷದವರ ಪೂರ್ಣ ಸಹಕಾರವಿದೆ. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಿದೆ, beg, borrow& steal. ಎಲ್ಲಿಂದಲಾದರೂ ತೆಗೆದುಕೊಂಡು ಬನ್ನಿ, ಬೇಗ ಕೆಲಸ ಮುಗಿಸಿ ಎಂದು ಹೇಳಿದೆ. ಮತ್ತೆ ಈ project ಗಳನ್ನು ಹೀಗೇ ಎಳೆದುಕೊಂಡು ಹೋಗುವುದು ಬೇಡ. ನಾವು ಕುಡಿಯುವ ನೀರಿಗೆ ಕೊಡುತ್ತೇನೆಂದು ಹೇಳುವುದು, ಕೆರೆಗಳನ್ನು ತುಂಬಿಸುತ್ತೇವೆ ಎಂದು ಹೇಳುವುದು, ಕುಡಿಯುವ ನೀರಿಗೂ ಇಲ್ಲ, ಆ ಕೆರೆಗಳಿಗೂ ಇಲ್ಲ. ಮತ್ತೆ ಎಲ್ಲ ಏತ ನೀರಾವರಿ ಮಾಡಬೇಕೆ? Majority ಯಲ್ಲಿ ಏತ ನೀರಾವರಿಗಳಿವೆ. 9 ಉಪ ಯೋಜನೆಗಳಲ್ಲಿ ಏತ ನೀರಾವರಿ ಯೋಜನೆಗಳಿವೆ. ಏತ ನೀರಾವರಿ ಯೋಜನೆಗಳಿಗೆ ಪವರ್ ಇರಬೇಕು. ಪವರ್ ಇಲ್ಲದೇ ಹೋದರೆ ಏತ ನೀರಾವರಿ ಇಲ್ಲ, ಪ್ರೆತನೂ ಇಲ್ಲ. ನಾವು ನೋಡಿದಹಾಗೆ, ಅನೇಕ ಏತ ನೀರಾವರಿ ಯೋಜನೆಗಳು power problem ನಿಂದ they are not running at all.

ನೀರೇ ಇಲ್ಲ. ಮುಳವಾಡ ಏತನೀರಾವರಿ ಯೋಜನೆಯೆಂದರೆ, ೨ ಲಕ್ಷದ ೨೨ ಸಾವಿರ ಹೆಕ್ಟೇರ್‌ಗೆ ನೀರು ಕೊಡುವ ಯೋಜನೆ. It is a big project. ಅಷ್ಟಕ್ಕೆ power ತಯಾರು ಮಾಡಿಕೊಳ್ಳಬೇಕಲ್ಲವೇ? ನಿರಂತರವಾಗಿ ೨೪ ಗಂಟೆಯೂ power ಸಿಗುವಂತಾಗಬೇಕು. ಅನೇಕ ಸಾರಿ ನಿರಂತರವಾಗಿ power ಕೊಡುತ್ತೇವೆಂದು ಹೇಳುತ್ತೀರಿ. ಆದರೆ, ವಿದ್ಯುತ್ ಇಲ್ಲದೇ ಎಲ್ಲಿಯೂ pump-sets ಓಡುವುದಿಲ್ಲ. ನಿರಂತರ ಜ್ಯೋತಿ ಎಂಬ ಕಾರ್ಯಕ್ರಮ ಮಾಡಿದ್ದೀರಿ. ಅಪ್ಪಚ್ಚು ರಂಜನ್‌ರವರೆ, ಕಾಫಿ ತೋಟಗಳಲ್ಲಿ ವಿದ್ಯುತ್ ಇಲ್ಲದೆ pump-set ಓಡುತ್ತವೆಯೇ?

ಶ್ರೀ ಎಸ್.ಕೆ. ಬೆಳ್ಳುಬ್ಬಿ (ಹಜ್ ಮತ್ತು ವಕ್ಫ್, ಕೃಷಿ ಮತ್ತು ಮಾರುಕಟ್ಟೆ ಸಚಿವರು) : ವಿದ್ಯುತ್ ಸಲುವಾಗಿ ನನ್ನ ಕ್ಷೇತ್ರದ ಕೂಡಗಿಯಲ್ಲಿ ೪೦೦೦ ಮೆ.ವ್ಯಾಟ್ ವಿದ್ಯುತ್ ಸಿಗುತ್ತದೆ.

ಶ್ರೀ ಸಿದ್ದರಾಮಯ್ಯ : Minister ಆಗಿದ್ದೇನೆಂದು ಏನಾದರೂ ಮಾಡಿಕೊಂಡಿದ್ದೀರಿ ಎಂದು ತೋರುತ್ತದೆ. ನಮ್ಮ ಕಡೆ ಇಲ್ಲ. ನಿಮ್ಮ ಕ್ಷೇತ್ರದ್ದು ಹೇಳಬೇಡಿ. ಬೇರೆ ಕ್ಷೇತ್ರದ್ದು ಹೇಳಿ. ವಿರೋಧ ಪಕ್ಷದವರ ಯಾವುದಾದರೂ ಒಂದು ಕ್ಷೇತ್ರದ್ದಾದರೂ ಹೇಳಿ.

ಶ್ರೀ ಎಸ್.ಕೆ. ಬೆಳ್ಳುಬ್ಬಿ : ನನ್ನ ಕ್ಷೇತ್ರದಲ್ಲಿ ಈಗ ಕಾಮಗಾರಿ ಪ್ರಾರಂಭವಾಗಿದೆ.

ಶ್ರೀ ಸಿದ್ದರಾಮಯ್ಯ : ನಿರಂತರ ಜ್ಯೋತಿ ಎಂಬ ಕಾರ್ಯಕ್ರಮ ಮಾಡಿ ನಿರಂತರ ಜ್ಯೋತಿಯೂ ಇಲ್ಲ, ಏನೂ ಇಲ್ಲ.

ಶ್ರೀ ಎಸ್.ಕೆ. ಬೆಳ್ಳುಬ್ಬಿ : ವಿದ್ಯುತ್ ಉತ್ಪಾದನೆ ನಮ್ಮಲ್ಲಿ ಆಗಿಯೇ ಇಲ್ಲ. ಹೊಸದಾಗಿ ೪೦೦೦ ಮೆ.ವ್ಯಾಟ್ ವಿದ್ಯುತ್ ನಮ್ಮಲ್ಲಿ ಆಗುತ್ತಿದೆ, ಮುಂದೆ ಎಲ್ಲಾ ಸರಿಹೋಗುತ್ತದೆ.

ಶ್ರೀ ಬಿ. ಸುರೇಶ್ ಗೌಡ : ನನ್ನ ಕ್ಷೇತ್ರದ ೧೪೦ ಹಳ್ಳಿಗಳಲ್ಲಿ ಮಾಡಿದ್ದೇವೆ, ಅದು ಯಶಸ್ವಿಯಾಗಿದೆ. ನಿರಂತರ ಜ್ಯೋತಿಯಿಂದ ಜನರು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿಕೊಂಡಿದ್ದಾರೆ. Flour Mill, ಶಾಲಾ ಕಾಲೇಜುಗಳಲ್ಲಿರುವ computer ಗಳಿಗೆ ಅನುಕೂಲವಾಗಿದೆ.

ಶ್ರೀ ಸಿದ್ದರಾಮಯ್ಯ : What about pumpsets?

ಶ್ರೀ ಬಿ. ಸುರೇಶ್‌ಗೌಡ : Pumpsets ಗೆ ನಿರಂತರ ಜ್ಯೋತಿ ಕೊಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ : ರೈತರಿಗೆ ಬೇಕಾಗಿರುವುದು ಏನು? ನಾನು ಹೇಳುತ್ತಿರುವುದು pumpsets are not running.

ಅಧ್ಯಕ್ಷರು : Please, ವಿಷಯಾಂತರ ಬೇಡ.

ಶ್ರೀ ಹೆಚ್.ಡಿ. ರೇವಣ್ಣ : ನಿರಂತರ ಜ್ಯೋತಿಗೋಸ್ಕರ ಎಷ್ಟು ಮಂಜೂರಾತಿ ಆಗಿದೆ, ಎಷ್ಟು ಕೆಲಸವಾಗಿದೆ ಎನ್ನುವ ವಿವರವನ್ನು ತಿಳಿಸುವುದಕ್ಕೆ ಹೇಳಿ. ನನ್ನ ಕಾಲದಲ್ಲಿ ಏನಿತ್ತು, ಏನಿಲ್ಲ, ಈ ಕಾಲದಲ್ಲಿ ಏನಿದೆ, ಈ ಕಾಲದಲ್ಲಿ ಮಾಡಿರುವುದು ಇಷ್ಟೆ. ೧೨,೯೦೦ ಕೋಟಿ

ರೂಪಾಯಿಗಳ ಸಾಲವನ್ನು ೫ ಕಂಪನಿಗಳಿಂದ ಮಾಡಿರುವುದು ಬಿಟ್ಟರೆ ಬೇರೆ ಏನೂ ಇಲ್ಲ. ನಷ್ಟ ಆಗಿದೆ. ಇದನ್ನು ನಾನು ಹೇಳುತ್ತಿಲ್ಲ. ೫ ಕಂಪನಿಗಳಿಂದ ೧೨ ಸಾವಿರ ಚಿಲ್ಲರೆ ಕೋಟಿ ರೂಪಾಯಿಗಳು ನಷ್ಟವಾಗಿದೆ. ನನ್ನ ಕಾಲದಲ್ಲಿ ಎಷ್ಟು ನಷ್ಟವಾಗಿದೆ ಎನ್ನುವುದನ್ನು ಸುರೇಶ್ ಗೌಡರು ಹೇಳುವುದಕ್ಕೆ ಕೇಳಿ. ನನ್ನ ಕಾಲದಲ್ಲಿ ಎಷ್ಟು ನಷ್ಟವಾಯಿತು? ಕಳೆದ ೪ ವರ್ಷಗಳಲ್ಲಿ ಎಷ್ಟು ನಷ್ಟವಾಗಿದೆ? ಮೂರು ಸಾರಿ current rate hike ಮಾಡಿಯೂ ೧೨ ಸಾವಿರ ಕೋಟಿ ರೂಪಾಯಿ ನಷ್ಟವಾಗಿದೆ ಅಂದರೆ, ಏನಿದೆ ಎಂಬುದನ್ನು ಅವರು ಹೇಳಲಿ. ಚರ್ಚೆ ಮಾಡಬೇಕೆಂದಿದ್ದರೆ ನಾಳೆ ತೆಗೆದುಕೊಳ್ಳೋಣ. ನಾನು ರೆಡಿ ಇದ್ದೇನೆ.

ಶ್ರೀ ಸಿದ್ದರಾಮಯ್ಯ : ಇದೆಲ್ಲದಕ್ಕೂ simultaneously ಸಿದ್ಧತೆ ಮಾಡಿಕೊಳ್ಳಬೇಕೆನ್ನುವ ಕಾರಣಕ್ಕೋಸ್ಕರ ಇದನ್ನು ಹೇಳುತ್ತಿದ್ದೇನೆ. ಏಕೆಂದರೆ, ನಾವು ಹಿಂದೆ ನೋಡಿದ್ದೇವೆ, ನೀರು ಶೇಖರಣೆ ಮಾಡಿಕೊಂಡಿದ್ದೇವೆ, ಜಮೀನುಗಳಿಗೆ ನೀರು ಕೊಡುವುದಕ್ಕೆ ಆಗಲಿಲ್ಲ. Is it not a fact? ನಮ್ಮಲ್ಲಿ ನೀರಿದೆ. ಜಮೀನುಗಳಿಗೆ ನೀರು ಕೊಡುವುದಕ್ಕಾಗುವುದಿಲ್ಲ. ಒಂದು ಕಡೆ ನಾಲೆ ತೋಡಿಲ್ಲ, ಇನ್ನೊಂದು ಕಡೆ ವಿದ್ಯುತ್ ಇರುವುದಿಲ್ಲ. ಇನ್ನೊಂದು ಕಡೆ distributaries ಇರುವುದಿಲ್ಲ. ಹೀಗಾಗಿ ನಾವು ನೀರು ಕೊಟ್ಟಿಲ್ಲ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ನೀವು ನಿಮ್ಮ plan ಸರಿಯಾಗಿ ಮಾಡಬೇಕು. Plan ಮಾಡಿದ ಮೇಲೆ ಅದಕ್ಕೆ time bound ಮಾಡಿ ಕಾರ್ಯಕ್ರಮಗಳನ್ನು ಮುಗಿಸುವ ಸಿದ್ಧತೆ ಮಾಡಿಕೊಂಡರೆ ಮಾತ್ರ ನಾವು ಸಮಯಕ್ಕೆ ಸರಿಯಾಗಿ, ಕಾಲಕ್ಕೆ ಸರಿಯಾಗಿ ಒಂದು ಕಾಲಮಿತಿಯಲ್ಲಿ ಕೆಲಸ ಮುಗಿಸಲಿಕ್ಕೆ ಸಾಧ್ಯವಾಗುತ್ತದೆ, ನೀರು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಒಂದೊಂದು project ಅನ್ನು ನಾವು ೧೦, ೧೫, ೨೦ ವರ್ಷಗಳ ಕಾಲ ಮಾಡಿದರೆ ೨೦ ವರ್ಷಗಳಲ್ಲಿ ಒಂದೊಂದು generation ಮುಗಿಯುತ್ತದೆ. ಇನ್ನೊಂದು generation ಬರುತ್ತದೆ. ಆ ಕಾರಣದಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ. ೩ನೇ ಹಂತದಲ್ಲಿ dam height ಹೆಚ್ಚಿಸಬೇಕು. Dam height ಹೆಚ್ಚಿಸಿದರೆ ೫೧೯ ರಿಂದ ೫೨೪.೨೭ ಗೆ ಹೆಚ್ಚಳವಾಗುತ್ತದೆ. ಅದನ್ನು ಮಾಡಿದ ತಕ್ಷಣವೇ ೨೦ ಹಳ್ಳಿ-

ಗಳು ಮುಳುಗಡೆಯಾಗುತ್ತವೆ, ೭೭ ಸಾವಿರ ಎಕರೆ ಜಮೀನು ಮುಳುಗಡೆಯಾಗುತ್ತದೆ. ೨೦ ಹಳ್ಳಿಗಳನ್ನು shift ಮಾಡಲಿಕ್ಕೆ ಕೂಡಲೆ ಕ್ರಮ ತೆಗೆದುಕೊಳ್ಳಬೇಕು. ಅವರಿಗೆ rehabilitation ಮಾಡುವುದು, ಅವರ ಜಮೀನು acquire ಮಾಡುವುದು, ಅವರಿಗೆ ಎಲ್ಲಾ ವಸತಿ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು, infrastructure ಅನ್ನು development ಮಾಡಿಕೊಡತಕ್ಕದ್ದು, ಇವೆಲ್ಲವೂ simultaneously ಆಗ ಬೇಕಲ್ಲವೇ? ೫ ವರ್ಷಗಳಲ್ಲಿ ಮುಗಿಸುತ್ತೇವೆಂದರೆ, all these works will have to be begun simultaneously. ಇಲ್ಲದಿದ್ದರೆ ಹೇಗೆ ಆಗುತ್ತದೆ? ನನಗೆ ಗೊತ್ತಿರುವ ಮಟ್ಟಿಗೆ ನಮ್ಮ ಭಾಗದ MLA ಗಳು ಹೇಳುವ ಮಟ್ಟಿಗೆ ಇವತ್ತಿನ ವರೆಗೆ ೭೭ ಸಾವಿರ ಎಕರೆ ಜಮೀನು ಮುಳುಗಡೆಯಾಗುತ್ತದೆ, ಅದನ್ನು acquire ಮಾಡಬೇಕಲ್ಲವೇ? ಅವರಿಗೆ ಪರಿಹಾರ ಕೊಡಬೇಕಲ್ಲವೆ? ಅವರಿಗೆಲ್ಲ ಪರಿಹಾರ ಕೊಡಬೇಕಾದರೆ so far ೪(೧), 6(1) notification ಆಗಿಲ್ಲ. Acquisition proceedings ಆಗುವುದು ಯಾವಾಗ? ಅವರಿಗೆ ಪರಿಹಾರ ಕೊಡುವುದು ಯಾವಾಗ? ಅವರನ್ನು ಅಲ್ಲಿಂದ ಖಾಲಿ ಮಾಡಿಸುವುದು ಯಾವಾಗ? ಅವರಿಗೆ ಪುನರ್‌ವಸತಿ ಕಲ್ಪಿಸುವುದು ಯಾವಾಗ? ಇವತ್ತು ಈ ಪ್ರಶ್ನೆ ಇರುವುದು. ಎರಡನೇ ನ್ಯಾಯಾಧಿಕರಣದ ತೀರ್ಪು ಬಂದು ಎರಡು ವರ್ಷಗಳು ಆಗುತ್ತಾ ಬಂದಿದೆ. ಇನ್ನೂ process ಪ್ರಾರಂಭವಾಗಿಲ್ಲ. ಎರಡು ಬಜೆಟ್ ಮಂಡನೆ ಆಯಿತು. ಈ ಹಿನ್ನೆಲೆಯಲ್ಲಿ ನಾನು ಹೇಳುತ್ತಿದ್ದೇನೆ. ನೀವು ಕೂಡಲೇ ಪ್ರಾರಂಭಿಸಿ. 4(1), 6 (1) notification ಇಷ್ಟು ಹೊತ್ತಿಗೆ ಆಗಬೇಕಾಗಿತ್ತು. Acquisition proceedings ಮುಗಿಯಬೇಕಾಗಿತ್ತು. ಆದರೆ, ಇವತ್ತಿನವರೆಗೆ ಏನೂ ಆಗಿಲ್ಲ?

ಶ್ರೀ ಬಸವರಾಜ ಬೊಮ್ಮಾಯಿ : ತಾವು ಹೇಳಿದಂತೆ ೭೭ ಸಾವಿರ ಎಕರೆ ಜಮೀನು ಮುಳುಗಡೆಯಾಗುತ್ತದೆ. ೨೫ ಸಾವಿರ ಎಕರೆ ನಮ್ಮ project ಗೆ canalಗೆ ಬೇಕಾಗಿರುವುದು. ಒಟ್ಟು ೧ ಲಕ್ಷದ ೫ ಸಾವಿರ ಎಕರೆ acquisition ನಾವು ಮಾಡಬೇಕಾಗುತ್ತದೆ. ೭೭ ಸಾವಿರ ಎಕರೆಯ complete survey ಆಗುತ್ತಿದೆ. Industries ಗೋಸ್ಕರ ೧೦೦, ೨೦೦ acres ಜಾಗ ತೆಗೆದುಕೊಳ್ಳಬೇಕಾದರೆ ಯಾವ ರೀತಿ ಆಗುತ್ತದೆ?

ಯಾವ ಲೋಪದೋಷಗಳು ಆಗುತ್ತವೆ ? ಯಾವ ರೀತಿಯಾಗಿ ತಡವಾಗುತ್ತದೆ ಎಂಬುದು ತಮಗೆ ಗೊತ್ತಿದೆ. ಆ ಎಲ್ಲಾ ಹಿನ್ನೆಲೆಯಲ್ಲಿ ೭೭ ಸಾವಿರ ಎಕರೆಯನ್ನು ನಾವು complete ಆಗಿ lider based survey ಮಾಡುತ್ತಿದ್ದೇವೆ. ಈಗಾಗಲೇ ಒಂದು ಹಂತಕ್ಕೆ ಬಂದಿದೆ. ಆದಷ್ಟು ಬೇಗನೆ land acquisition ಪ್ರಕ್ರಿಯೆ ಪ್ರಾರಂಭವಾಗುತ್ತದೆ. Land acquisition ಪ್ರಕ್ರಿಯೆ ಮಾಡುವಾಗ ೭೭ ಸಾವಿರ ಎಕರೆಯ ಸಂಪೂರ್ಣ ಮಾಲೀಕರು, ಅವರ document ನಲ್ಲಿರುವ details ಎಲ್ಲವನ್ನೂ precautions ತೆಗೆದುಕೊಳ್ಳಬೇಕಾಗುತ್ತದೆ. ೭೭,೦೦೦ acres, it is a very big task. ಅದನ್ನು ನಾವು ಮಾಡುತ್ತಿದ್ದೇವೆ. ಖಂಡಿತವಾಗಿಯೂ ಕೂಡಲೆ ಮಾಡುತ್ತೇವೆ. R & R policy base line fix ಮಾಡುತ್ತಿದ್ದೇವೆ. Base line fix ಮಾಡುವುದಕ್ಕೆ ಈಗಾಗಲೇ ೨ ಸಂಸ್ಥೆಗಳಿಗೆ ಕೊಟ್ಟಿದ್ದೇವೆ. ಧಾರವಾಡದಲ್ಲಿರುವ ಒಂದು ಸಂಸ್ಥೆಗೆ ಕೊಟ್ಟಿದ್ದೇವೆ. ಇಲ್ಲಿ ಎರಡು ಕೆಲಸಗಳಿವೆ. ತಮಗೆ ಹೇಳುತ್ತೇವೆ. ಏಕೆಂದರೆ, R & R frame-work ಮಾಡುವ ಸಲುವಾಗಿ CMDR ಸಂಸ್ಥೆ, Dharwad ಕ್ಕೆ ಈಗಾಗಲೇ ಕೊಟ್ಟಿದ್ದೇವೆ. ಇದರಲ್ಲಿ land acquisition ಬರುತ್ತದೆ ಮತ್ತು R & R frame work ಕೂಡ ಬರುತ್ತದೆ. Base Line Socioeconomic Surveyಯನ್ನು ಮಾಡಲು ಹೈದರಾಬಾದ್ ಸಂಸ್ಥೆಗೆ ಕೊಟ್ಟಿದ್ದೇವೆ. ಎಲ್ಲ ಕೆಲಸಗಳು ಆಗುತ್ತಿವೆ. ಅದು ಆದ ತಕ್ಷಣವೇ R & R frame work ಆದ ತಕ್ಷಣ ಎಲ್ಲ ಕೆಲಸಗಳನ್ನು including land acquisition ನಾವು ತೆಗೆದುಕೊಳ್ಳುತ್ತೇವೆ. ಇದು ಸಣ್ಣ ಕೆಲಸವಲ್ಲ, ದೊಡ ಕೆಲಸ. ಅದನ್ನು ಮಾಡುವಾಗ comprehensive ಆಗಿ ಮಾಡಬೇಕೆನ್ನುವ ದೃಷ್ಟಿಯಿಂದ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಕೆಲವೇ ದಿನಗಳಲ್ಲಿ land acquisition proceedings ಕೂಡ ಪ್ರಾರಂಭ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : Survey ಕೆಲಸ ಬೇರೆ ಕೆಲಸ ನಡೆಯುತ್ತಿದೆ I am not disputing all those things. The question is; ಇಷ್ಟು ಹೊತ್ತಿಗೆ ಮಾಡಿ ಮುಗಿಸಬೇಕಾಗಿತ್ತು. Award ಆಗಿ

೨ ವರ್ಷಗಳಾ-ಗುತ್ತಿವೆ. ಎರಡು ವರ್ಷ ವಿಳಂಬವಾಗಿದೆ, ಇನ್ನೂ ಬಹಳ ವಿಳಂಬ ಮಾಡಿಕೊಳ್ಳುವುದು ಬೇಡ. ಈಗಾಗಲೇ ಸಾಕಷ್ಟು ವಿಳಂಬವಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ : Constructive ಆಗಿ ಹೇಳುತ್ತಿದ್ದೀರಿ. ನಾನು ಹಾಗೆಯೇ ಸ್ವೀಕಾರ ಮಾಡಿದ್ದೇನೆ.

ನೀವು Deputy CM ಆಗಿದ್ದವರು. Land acquisitionನಲ್ಲಿ ಯಾವ ತರಹದ constraints ಇವೆ ಎನ್ನುವುದನ್ನು ತಾವು ಅರ್ಥ ಮಾಡಿಕೊಂಡಿದ್ದೀರಿ ಎನ್ನುವುದು ನನ್ನ ಭಾವನೆ.

ಶ್ರೀ ಸಿದ್ದರಾಮಯ್ಯ : ನನಗೂ practical problems ಅರ್ಥವಾಗುತ್ತವೆ. ಹಾಗೆಂದು ನಾವು ಪ್ರಯತ್ನಗಳನ್ನು ಮಾಡದಿದ್ದರೆ ಹೇಗೆ?

ಶ್ರೀ ಬಸವರಾಜ ಬೊಮ್ಮಾಯಿ : ಉತ್ತರ ಕೊಡುವಾಗ ಏನೇನು ಮಾಡಿದ್ದೇವೆಂದು ಹೇಳುತ್ತೇವೆ.

ಶ್ರೀ ಸಿದ್ದರಾಮಯ್ಯ : ಆಮೇಲೆ ವಿವರವಾದ ಉತ್ತರ ಕೊಡಿ. ಏನೇನು ಪ್ರಯತ್ನಗಳನ್ನು ಮಾಡಿದ್ದೀರಿ? ನಿಮ್ಮ ಪ್ರಯತ್ನಗಳ ನಡುವೆಯೂ ಏಕೆ ವಿಳಂಬವಾಗುತ್ತಿದೆ? ನಾವು ಸ್ವಲ್ಪ ತಿಳಿದುಕೊಳ್ಳೋಣ. ಏಕೆಂದರೆ, ನಿಮ್ಮದು ವಿಳಂಬವಾಗಿದೆ ಎನ್ನುವುದು ನಮ್ಮ ಅಭಿಪ್ರಾಯವಾಗಿರುವುದರಿಂದ ಎರಡು ವರ್ಷಗಳು ಎಂದರೆ it is sufficient. ಒಂದು ವರ್ಷಕ್ಕೆ ಇರುವುದು ೩೬೫ ದಿನಗಳು. ಎರಡು ವರ್ಷಗಳಾಗುತ್ತಿವೆ. ಇನ್ನೂ acquisition proceedings ಆಗಲಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : Stage-1 and stage-2 ದು 40 ವರ್ಷಗಳಾದವು.

ಶ್ರೀ ಸಿದ್ದರಾಮಯ್ಯ : ನೋಡಿ ಪುನ: ಹಿಂದಕ್ಕೆ ಹೋದರೆ ಹೇಗೆ?

ಶ್ರೀ ಬಸವರಾಜ ಬೊಮ್ಮಾಯಿ : ೪೦ ವರ್ಷವಾಗಿರುವುದು.

ಶ್ರೀ ಸಿದ್ದರಾಮಯ್ಯ : ನೀವು ಇದ್ದೀರಿ ನಾವ ಇದ್ದೇವು. ಎಸ್.ಆರ್. ಬೊಮ್ಮಾಯಿರವರು ಇದ್ದರು. ನೀವು ಇದ್ದೀರಿ, ಕಾಂಗ್ರೆಸ್-ನವರು ಇದ್ದರು.

ಶ್ರೀ ಬಸವರಾಜ ಬೊಮ್ಮಾಯಿ : ನಾವು ಎರಡು ವರ್ಷಗಳಲ್ಲಿ ಮಾಡಿರುವಂಥ ಕೆಲಸದ ಬಗ್ಗೆ ಹೇಳುವುದಾದರೆ, such a strong foundation ಹಾಕಿದ್ದೇವೆ, ಮುಂದಿನ ೨-೩ ವರ್ಷಗಳಲ್ಲಿ ಪ್ರಥಮ

ಹಂತದಲ್ಲಿ stage-೩ ಗೆ ನೀರನ್ನು ಕೊಡುವುದಕ್ಕೆ ನಾವು strong foundation ಹಾಕಿದ್ದೇವೆ. ಆದುದರಿಂದ, compare ಮಾಡಿದಾಗ ಇವತ್ತು UKP Stage-೩ ನಿಜವಾಗಲೂ ಕೂಡ accelerated project ಆಗುತ್ತಿದೆ.

ಶ್ರೀ ಸಿದ್ದರಾಮಯ್ಯ : ಹಿಂದೆ ಎಲ್ಲಾ ಒಂದು ಕಾಲದಲ್ಲಿ ನಮ್ಮ ಜನತಾ ಪಾರ್ಟಿಯೊಳಗಡೆ ಜಗಳವಾಗುತ್ತಿತ್ತು. ನೀರಾವರಿಗೆ ಎಷ್ಟು ದುಡ್ಡು ಕೊಡಬೇಕೆನ್ನುವ ವಿಚಾರದಲ್ಲಿ ಚರ್ಚೆ ನಡೆಯಿತು. ೨೦೦ ಕೋಟಿ, upper Krishna ಗೆ ೧೦೦ ಕೋಟಿ, ಕಾವೇರಿ ಬೇಸಿನ್‌ಗೆ, ೨೦೦ ಕೋಟಿ ಕೃಷ್ಣಾ ಬೇಸಿನ್‌ಗೆ ಎನ್ನುವುದೇ ಒಂದು ಜಗಳ ನಡೆಯಿತು. ಅದು ಬೇರೆ ಆಗ ದುಡ್ಡು ಇರುತ್ತಿರಲಿಲ್ಲ. ಬಜೆಟ್‌ನಲ್ಲಿ ದುಡ್ಡು ಅಲೋಕೇಟ್ ಮಾಡುತ್ತಿರಲಿಲ್ಲ, ದುಡ್ಡು ಇರುತ್ತಿರಲಿಲ್ಲ. As a matter of fact, ೨೦೦೫-೦೬ ರಿಂದ ಇದಕ್ಕೆ ಸ್ವಲ್ಪ acceleration ಸಿಕ್ಕಿದ್ದು. ಏಕೆಂದರೆ, ಒಂದು ಸಾವಿರ ಕೋಟಿ ಖರ್ಚು ಮಾಡಬೇಕೆಂದು ತೀರ್ಮಾನ ಮಾಡಿದ ಮೇಲೆನೆ upper Krishna ಗೆ ವೇಗ ಸಿಕ್ಕಿದ್ದು. ಕಾರಜೋಳರವರೆ ಅಲ್ಲಿಯವರೆಗೆ ಇರಲಿಲ್ಲ. ಆಗ ಒಂದು ದೊಡ್ಡ ಜಗಳ ನಡೆಯಿತು. ನಾನು ಏನು ಹೇಳುತ್ತೇನೆಂದರೆ, ಈಗ ಹಣ ನಮ್ಮ ಹತ್ತಿರ ಇದೆ. ದುಡ್ಡಿಗೆ ತೊಂದರೆಯಿಲ್ಲ. ಖರ್ಚು ಮಾಡಿ. ಕೇಂದ್ರ ಸರ್ಕಾರ ಕೂಡ ಸಹಾಯ ಮಾಡುತ್ತಿದೆ, ನಮಗೆ ಬೇರೆ ಬೇರೆ ಏಜೆನ್ಸಿಗಳಿಂದ ಸಹಾಯ ಸಿಗುತ್ತದೆ. ಖರ್ಚು ಮಾಡಿ ದುಡ್ಡಿಗೇನೂ ತೊಂದರೆಯಿಲ್ಲ. ಆ ಕಾಲದಲ್ಲಿ ದುಡ್ಡಿಗೆ ತೊಂದರೆಯಿತ್ತು. ಅಷ್ಟೊಂದು ದುಡ್ಡು ಖರ್ಚು ಮಾಡುವುದಕ್ಕಾಗುತ್ತಿರಲಿಲ್ಲ. ನನ್ನ ಪ್ರಕಾರ ಈಗ ಹತ್ತು ಸಾವಿರ ಕೋಟಿ ಖರ್ಚು ಮಾಡುವುದು ನನ್ನ ಪ್ರಕಾರ it is not at all a problem to the Government. Because, the budget is more than Rs. one lakh crore. ರೂ. ೧,೦೪,೦೦೦/- ಕೋಟಿ. ಇದರಲ್ಲಿ ೧೦% of the budget is not a very big thing. ಖರ್ಚು ಮಾಡಿ. ಹತ್ತು ಸಾವಿರ ಕೋಟಿ ಖರ್ಚು ಮಾಡಿ. Time bound programme ಹಾಕಿ ಐದು ವರ್ಷಗಳಲ್ಲಿ ಮುಗಿಸಿ. Why you have restricted to only Rs.೧೭,೨೦೬ crore? Make it Rs.೩೦,೦೦೦ crore and

complete it. ನಾವು ಅಧಿಕಾರಕ್ಕೆ ಬಂದಗ ಮೊದಲು ಅದನ್ನು ಮಾಡುವುದು. ಏನಾದರೂ ಜನ ಆಶೀರ್ವಾದ ಮಾಡಿ ನಮಗೆ ಅಧಿಕಾರ ಕೊಟ್ಟರೆ within five years ಅದನ್ನು ಮಾಡಿ ಮುಗಿಸದೇ ಹೋದರೆ ಬೇರೆ ಹೆಸರನ್ನು ಕರೆಯಿರಿ. ತಮಾಷೆಯಲ್ಲ. I am not joking. ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ : Foundation ಅನ್ನು continue ಮಾಡಿದರೆ, ಅದು ನಮ್ಮ ಸರ್ಕಾರ ಇರಬಹುದು, ಇನ್ನೊಂದು ಸರ್ಕಾರ ಇರಬಹುದು. ನಾವು ಹಾಕಿರುವ foundation continue ಮಾಡಿದರೆ ಖಂಡಿತವಾಗಿಯೂ ಮೂರು ವರ್ಷದಲ್ಲಿ ನೀರು ಕೊಡಬಹುದು. ಐದು ವರ್ಷದ್ದು ಏಕೆ ಮಾತನಾಡಬೇಕು?

ಶ್ರೀ ಸಿದ್ದರಾಮಯ್ಯ : ಮೂರು ವರ್ಷನೇ ಮೂರು ವರ್ಷಗಳಲ್ಲಿಯಾದರೂ ಮಾಡಿ. We all will cooperate. Complete it in three years.

ಶ್ರೀ ಬಸವರಾಜ ಬೊಮ್ಮಾಯಿ : ಮೂರು ವರ್ಷಗಳಲ್ಲಿ ಮೊದಲನೇ ಹಂತದ ಮುಳುವಾಡ ಇರಬಹುದು, ಚಿಮ್ಮಲಗಿ ಇರಬಹುದು, ಗುತ್ತಿ ಬಸವಣ್ಣ ಇರಬಹುದು, ನಾವು ಹಾಕಿರುವ ಫೌಂಡೇಷನ್‌ನಿಂದಲೇ ನೀರು ಕೊಡಬಹುದು.

ಶ್ರೀ ಸಿದ್ದರಾಮಯ್ಯ : ಹಾಗಾದರೆ ಮಾಡಿ. Why you have phased it out for 7 years?

ಶ್ರೀ ಬಸವರಾಜ ಬೊಮ್ಮಾಯಿ : ಮೂರು ವರ್ಷಗಳಲ್ಲಿ ಮೊದಲನೇ ಹಂತದಲ್ಲಿ ನೀರು ಕೊಡಬಹುದು. ಅಷ್ಟು strong foundation ಹಾಕಿ ಈಗಾಗಲೇ... ಕೆಲಸ ಆಗುತ್ತಿದೆ.

ಶ್ರೀ ಸಿದ್ದರಾಮಯ್ಯ : Mr.Basavaraj, ಹಾಗಾದರೆ ಏಳು ವರ್ಷವೆಂದು ಏಕೆ ಮಾಡಿಕೊಂಡಿದ್ದೀರಿ?

ಶ್ರೀ ಬಸವರಾಜ್ ಬೊಮ್ಮಯಿ : ನೋಡಿ ನಾನು ಹೇಳುತ್ತೇನೆ ಕೇಳಿ. ಸುಮಾರು ೨,೫೦೦ ಕೋಟಿಗಿಂತ ಹೆಚ್ಚು ಕೆಲಸವನ್ನು ಟೆಂಡರ್ ಮಾಡಿ ground ಮಾಡಿದ್ದೇವೆ. ಆದುದರಿಂದ ನಾವು ಹಾಕಿರುವಂಥದ್ದನ್ನು ತೆಗ

ೆದುಕೊಂಡು ಹೋದರೆ ಮೊದಲನೆ ಹಂತದಲ್ಲಿ ನೀರು ಕೊಡಬಹುದು. ಐದು ವರ್ಷ ಏಕೆ ಬೇಕು?

ಶ್ರೀ ಎಂ.ಬಿ.ಪಾಟೀಲ್ : 7 years phasing ನೀವೇ ಮಾಡಿದ್ದು.

ಶ್ರೀ ಬಸವರಾಜ ಬೊಮ್ಮಾಯಿ : 7 years time is for the project. ಸರ್ಕಾರ ಎಂದರೆ ನಿರಂತರ, ನಾವು ಇರಬಹುದು ನಾವು ಇರಲಿಕ್ಕಿಲ್ಲ ಆದರೆ ನಾವು ಮಾಡಿರುವ ಕೆಲಸಗಳಿರುತ್ತವಲ್ಲವೆ? ತಾವು ಕೃಷಿ ಸಚಿವರಾಗಿ ಮಾಡಿರುವ ಕೆಲಸಗಳು ಇರುತ್ತವೆ, ಸಿದ್ದರಾಮಣ್ಣನವರು ಮಾಡಿರುವ ಕೆಲಸಗಳು ಇರುತ್ತವೆ, ನಾವೆಲ್ಲರೂ ರಾಜ್ಯಕ್ಕೋಸ್ಕರ ಮಾಡುತ್ತಿರುವುದು. Government is a continuous institution. ಅವರು ಹೇಳುವುದು ಇಷ್ಟೆ, ಸರಿಯಾದ ರೀತಿಯಲ್ಲಿ ಆದರೆ ವೇಗ ಬರುತ್ತದೆ ಎನ್ನುವ ದೃಷ್ಟಿಯಲ್ಲಿ ಅವರು ಹೇಳುತ್ತಿರುವುದು. ನಾನೇನು ಹೇಳುತ್ತಿದ್ದೇನೆ, ಕಳೆದ ಎರಡು ವರ್ಷಗಳಲ್ಲಿ ನಮ್ಮ ನಿರ್ಧಾರಗಳಿಂದ ನಾವು ground ಮಾಡಿರುವ ಕೆಲಸದಿಂದ ಖಂಡಿತವಾಗಿಯೂ ಆಗುತ್ತದೆ, except, ಈಗ ಏನು ಹೊಸದಾಗಿ ಬೇರೆ ಜಿಲ್ಲೆಗಳಲ್ಲಿ ಹೊಸ ಪ್ರಾಜೆಕ್ಟ್‌ಗಳು ತೆಗೆದುಕೊಳ್ಳುತ್ತೇವೆ ಅದು ಬಿಟ್ಟರೆ, ಬಿಜಾಪುರ, ಬಾಗಲಕೋಟೆ, ಗುಲ್ಬರ್ಗಾದಲ್ಲಿ ನಾವು ಏನು ತೆಗೆದುಕೊಂಡಿದ್ದೇವೆ ಮೂರು ವರ್ಷಗಳಲ್ಲಿ ಖಂಡಿತವಾಗಿ ನೀರು ಅಲ್ಲಿ ಕೊಡಬಹುದು.

ಶ್ರೀ ಸಿದ್ದರಾಮಯ್ಯ : ಈಗ ಮುಳುವಾಡ ಏತ ನೀರಾವರಿ ಯೋಜನೆಯನ್ನು ಮೂರು ವರ್ಷಗಳಲ್ಲಿ ಮುಗಿಸಿ ನೀರು ಕೊಡುತ್ತೇವೆಂದು ಹೇಳಿದ್ದಾರೆ. I welcome it. ಬಹಳ ಸಂತೋಷ. ೪೧೩೦ ಕೋಟಿ ಅದಕ್ಕೆ project cost. ಈ ವರ್ಷ ನೀವು ಇಡೀ upper Krishnaಗೆ ಇಟ್ಟುಕೊಂಡಿರುವುದು ೧೨೦೫ ಕೋಟಿ, ಹೇಗೆ ಮುಗಿಸುತ್ತೀರಿ?

ಶ್ರೀ ಬಸವರಾಜ ಬೊಮ್ಮಾಯಿ : ತಮ್ಮ ಸ್ಟೇಟ್‌ಮೆಂಟನ್ನು ನಾನು ಕರೆಕ್ಷನ್ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಪುನ: ಪುನ: ಏಕೆ ಏಳುತ್ತೀರಿ? ಒಟ್ಟಿಗೆ ಆಮೇಲೆ ಹೇಳಿ. ನಿಮಗೇನು ಇರಿಟೇಷನ್ ಆಗುವುದಿಲ್ಲ. ಸುಮ್ಮನೆ ಕಿವಿಗೆ ಹಾಕಿಕೊಳ್ಳಿ ನಾನು ಹೇಳುತ್ತೇನೆ. ೧೭೦೦ ಕೋಟಿ ೭ ವರ್ಷಕ್ಕೆ ಫೇಸ್‌ಗಳನ್ನು

ಮಾಡಿದ್ದಾರೆ. ೨೦೧೧-೧೨ ಕ್ಕೆ ೧೭೨೨ ಕೋಟಿ, ೨೦೧೨-೧೩ ಕ್ಕೆ ೧೨೦೫ ಕೋಟಿ, ೨೦೧೩-೧೪ಕ್ಕೆ ೩೪೪೧ ಕೋಟಿ, ೨೦೧೪-೧೫ ಕ್ಕೆ ೪೮೮೧ ಕೋಟಿ, ೨೮%. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಇದು ಯಾವ ಬೇಸಿಸ್ ಮೇಲೆ ಮಾಡಿದ್ದೀರಿ ಎಂದರೆ need based ಎಂದು ಹೇಳುತ್ತಿದ್ದೀರಿ Need based ಆಗಬೇಕಾದರೆ ಹೇಗೆ ಆಗುತ್ತದೆ? ನಿಮಗೆ ಲ್ಲಾಬೇಕಾದಂಥ ಸಿದ್ಧತೆಗಳು ಆಗಬೇಕು. Man power ಇರಬೇಕು, ಹಣ ಇರಬೇಕು, ಕೊಟ್ಟ ದುಡ್ಡನ್ನು ಬಳಸತಕ್ಕಂಥದ್ದಕ್ಕೆ ಎಲ್ಲಾ infrastructure ಇರಬೇಕು. ಅವೆಲ್ಲಾ ಸಿದ್ಧತೆ ಮಾಡಿಕೊಳ್ಳಿ. ಹತ್ತು ಸಾವಿರ ಕೋಟಿ ಖರ್ಚು ಮಾಡಬೇಕಾದರೆ ಏನು ಮಾಡಬೇಕೋ ಅದನ್ನು ಮಾಡಿ. ಮೂರು ವರ್ಷಗಳಲ್ಲಿ ಮಾಡಬೇಕೆಂದು ಹೇಳಿದ್ದಿರಲ್ಲಾ in stead of 7 years, complete it in 3 years. ನಾನು ಏನು ಹೇಳುವುದು ೫ ವರ್ಷದಲ್ಲಿ ಇಡೀ ಮೂರನೇ ಹಂತವನ್ನು ಪೂರ್ತಿಯಾಗಿ ಮುಗಿಸುತ್ತೇವೆ.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

೫,೩೦,೦೦೦ ಹೆಕ್ಟೇರ್ ಪ್ರದೇಶಕ್ಕೆ ನೀರು ಕೊಡುತ್ತೇವೆ, ಅದು ಏನೇ ಆಗಲಿ ಎಷ್ಟೇ ಖರ್ಚಾಗಲಿ, ಎಷ್ಟೇ ತೊಂದರೆಯಾಗಲಿ ಅದನ್ನು ನಾವು ಮಾಡುತ್ತೇವೆ ಎನ್ನತಕ್ಕ ಗಟ್ಟಿಯಾದ ನಿಲುವನ್ನು ಸರ್ಕಾರ ತೆಗೆದು-ಕೊಳ್ಳಬೇಕು. That is my point. That is my demand. ಇದು ಮಾಡಿ ಎನ್ನುವುದು ನನ್ನ ಒತ್ತಾಯ. ಈಗಾಗಲೇ sufficient time ಆಗಿ ಬಿಟ್ಟಿದೆ. Schme-A ನಲ್ಲಿ ಯಾರ್ಯಾರದು ಏನೇನು ಆಯಿತು, let's know. Look into all these things. ಈಗ ಮಾಡಿದರೆ ಪ್ರಯೋಜನವಿಲ್ಲ. ಸುಂಗದ ತುತ್ತಿಗೆ ರುಚಿ ಏನು ಬರುವುದಿಲ್ಲ. ಅವರು ಯಾರು ತಪ್ಪು ಮಾಡಿದ್ದಾರೆ, ಯಾರು ಮಾಡಿಲ್ಲ, ಆ ತರಹದ್ದು ಏನಾಯಿತು, ಆವೆಲ್ಲಾ ಈಗ ಬೇಡ. ಈಗ ನಮಗೆ ಆಗಬೇಕಾಗಿರುವುದು ಉಳಿದ ಅವಧಿಯಲ್ಲಿ ಎಷ್ಟು ಜಲ್ದಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಉಳಿದ ಕೆಲಸಗಳನ್ನು ಎಷ್ಟು ಜಾಗ್ರತೆಯಾಗಿ ಮಾಡಿ ಮುಗಿಸುವುದಕ್ಕೆ ಆಗುತ್ತದೆ, ಇದಕ್ಕೆ ಎಷ್ಟು ದುಡ್ಡು ಬೇಕಾಗುತ್ತದೆ. ಎಂಬುದು ಜಮೀನು acquire ಮಾಡುವುದು ಇರಬಹುದು, rehabilitation ಇರಬಹುದು. ನಮ್ಮ ಚರಂತಿಮಠ್ ಇಲ್ಲಿ ಇದ್ದಾರೆ, ಇವತ್ತು ಕೂಡ ಬಾಗಲ-

ಕೋಟೆಯ 1 & 2 rehabilitation work ಪೂರಾ ಮುಗಿದಿಲ್ಲ ಅಲ್ಲವೆ? ಇನ್ನೂ ಜಾಸ್ತಿ ಇದೆಯೆ? ನಾನು ಒಂದು ಸಾರಿ ಬಂದಿದ್ದಾಗ ಜನ ಇನ್ನೂ ದುಡ್ಡು ಕೊಟ್ಟಿಲ್ಲವೆಂದು ಹೇಳುತ್ತಿದ್ದರು. ಪರಿಹಾರ ಧನ ಕೊಟ್ಟಿಲ್ಲವೆಂದು ಹೇಳುತ್ತಿದ್ದರು.

ಶ್ರೀ ವೀರಣ್ಣ ಚರಂತಿಮಠ : ಇಲ್ಲಾ ಸಾರ್. ಎಲ್ಲಾ ಆಗಿದೆ. ಈಗ ತಾವು ಬರುವ date ಹೇಳಿದರೆ ನಾನೇ ಕರೆದುಕೊಂಡು ಹೋಗಿ ತೋರಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ನಾನು ಹೇಳಿದ್ದು ಒಂದು ವರ್ಷದ ಹಿಂದಿನ ಮಾತು.

ಶ್ರೀ ವೀರಣ್ಣ ಚರಂತಿಮಠ್ : ಇಲ್ಲಾ ನಾನೇ ಕರೆದುಕೊಂಡು ಹೋಗಿ ತೋರಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಎಲ್ಲಾ ಪರಿಹಾರ ಕೊಡಿಸಿದ್ದೀರಾ?

ಶ್ರೀ ವೀರಣ್ಣ ಚರಂತಿ ಮಠ್ : ಎಲ್ಲಾ ಆಗಿದೆ ೫೨೩ ಕೂಡ ಪೇಮೆಂಟ್ ಆಯಿತು. 3rd Phaseದು ಶುರು ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಎಲ್ಲಾ ಶಿಫ್ಟ್ ಆಗಿದ್ದಾರೆಯೆ?

ಶ್ರೀ ವೀರಣ್ಣ ಚರಂತಿ ಮಠ್ : ಎಲ್ಲಾ ಆಗಿದ್ದಾರೆ. Demolition ಕೂಡ ಆಯಿತು.

ಶ್ರೀ ಸಿದ್ದರಾಮಯ್ಯ :- ಆಗಿದೆಯೇ? ಪರವಾಗಿಲ್ಲ. ಆದರೆ, ನಾನು ಬಂದಾಗ ಆಗಿರಲಿಲ್ಲ.

ಶ್ರೀ ವೀರಣ್ಣ ಚರಂತಿಮಠ್ :- ನೀವು ಬಂದಾಗ ಈ ಕೆಲಸ ಆಗಿತ್ತು.

ಶ್ರೀ ಬಸವರಾಜ್ ಬೊಮ್ಮಾಯಿ :- ನಾವು ಬರುವುದಕ್ಕಿಂತ ಮುಂಚೆ ಎಷ್ಟು ಪೇಮೆಂಟ್ ಆಗಿತ್ತೋ, ನಾವು ಬಂದ ನಾಲ್ಕುವರೆ ವರ್ಷದಲ್ಲಿ ಅದಕ್ಕಿಂತ ಅಧಿಕ ಪೇಮೆಂಟ್ ಮಾಡಿದ್ದೇವೆ. ಅಂದರೆ, highest R&R payment ಅನ್ನು ನಾವು ಮಾಡಿದ್ದೇವೆ.

SRI SIDDARAMAIAH :- Very good.

ಶ್ರೀ ಬಸವರಾಜ ಬೊಮ್ಮಾಯಿ :- Compensation ಇರಬಹುದು ಅಥವಾ infrastructure ಇರಬಹುದು....

ಶ್ರೀ ಸಿದ್ದರಾಮಯ್ಯ :- ಮಾನ್ಯ ಬಸವರಾಜ್‌ರವರೆ, ತಾವು ಮತ್ತೆ ಮಾತನಾಡುವುದಕ್ಕೆ ಎದ್ದೇಳುವುದು ಬೇಡವೆಂದು ಹೇಳಿದರೂ ಮತ್ತೆ ಎದ್ದೇಳುತ್ತೀರಿ.

ಶ್ರೀ ಬಸವರಾಜ ಬೊಮ್ಮಾಯಿ :- ಇದು ಬಹಳ ಮುಖ್ಯವಾಗಿತ್ತು. ಆದ್ದರಿಂದ, ತಮ್ಮ ಅಪ್ಪಣೆ ಪಡೆದುಕೊಂಡು ಹೇಳುತ್ತೇನೆ. ಮಾನ್ಯ ಚರಂತಿಮಠ್‌ರವರೇ, ತಾವೇ ಹೇಳಿ.

ಶ್ರೀ ವೀರಣ್ಣ ಚರಂತಿಮಠ್ :- ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಲೋಕ್ ಅದಾಲತ್ ಮಾಡಿ 20 ವರ್ಷಗಳಿಂದ ಇದ್ದಂಥ ಬಡ್ಡಿ ಮತ್ತು ಅಸಲು ಸೇರಿ 220 ಕೋಟಿ ರೂಪಾಯಿ ಪೇಮೆಂಟ್ ಆಗಿದೆ.

ಶ್ರೀ ಟಿ.ಬಿ.ಜಯಚಂದ್ರ :- ಮಾನ್ಯ ಉಪಾಧ್ಯಕ್ಷರೆ, ೨೦೧೦ರಲ್ಲಿ ನ್ಯಾಯಧಿಕರಣದ ತೀರ್ಪು ಬಂತು. ತಾವು ಅಧಿಕಾರದಲ್ಲಿದ್ದಂತದ ಅವಧಿಯಲ್ಲಿಯೇ ತೀರ್ಪು ಬಂದಿದೆ. ಆದ್ದರಿಂದ, ಈ ಕೆಲಸವನ್ನು ನೀವೇ ಮಾಡಬೇಕು. ಈ ಎಲ್ಲ ಕೆಲಸವನ್ನು ಮಾಡಲಿ ಎಂಬ ಕಾರಣಕ್ಕಾಗಿಯೇ ಮಾನ್ಯ ಬಸವರಾಜ ಬೊಮ್ಮಾಯಿರವರನ್ನು ನೀರಾವರಿ ಇಲಾಖೆಯ ಸಚಿವರಾಗಿ ಮಾಡಿ ಕಳುಹಿಸಿದ್ದಾರೆ. ನೀವು ಮಾತನಾಡುವಾಗ ನಾನು ಈ ಕಡೆಯಿಂದ ನೋಡುತ್ತಿದ್ದೆ. ಅಲ್ಲಿ ಕೆಲವು ಪ್ರ್ಯಾಕ್ಟಿಕಲ್ ಸಮಸ್ಯೆಗಳಿವೆ ಅದು ನಿಜ. ನಾನು ಅದನ್ನು ಸಹ ಒಪ್ಪುತ್ತೇನೆ. ಆದರೆ ಒಂದು ಮುಖ್ಯವಾದ ವಿಷಯದ ಬಗ್ಗೆ ಯೋಚನೆ ಮಾಡುವುದಾದರೆ ಸ್ಕೀಂ-ಎ ಗೆ ಬರುವ ೭೨೯ ಟಿಎಂಸಿ ಯಲ್ಲಿ ನೀವು ಸುಮಾರು ೫೦೦ ರಿಂದ ೬೦೦ ಟಿಎಂಸಿ ನೀರನ್ನು ಬಳಕೆ ಮಾಡಿಕೊಂಡಿದ್ದೀರಿ. ಇನ್ನೂ ಸುಮಾರು ೧೨೦ ಟಿಎಂಸಿ ನೀರನ್ನು ಬಳಕೆ ಮಾಡಬೇಕು. ಇದಕ್ಕೆಲ್ಲಕ್ಕಿಂತ ಹೆಚ್ಚಾಗಿ ಯುಕೆಪಿ-೩ಯಲ್ಲಿ ನೀವೇನು anticipate ಮಾಡಿ 17,000 ಕೋಟಿ ರೂಪಾಯಿ ಎಂದು ಏನು ಹೇಳುತ್ತಿದ್ದೀರಿ all the 9 projects are under lift irrigation. ಇದಕ್ಕೆ ಎಷ್ಟು ಪವರ್ ಬೇಕಾಗುತ್ತದೆ? ಇದಕ್ಕೆ ಬೇಕಾಗುವ ಪವರ್ ಅನ್ನು ಯಾವರೀತಿಯಾಗಿ ಉತ್ಪಾದನೆ ಮಾಡುವುದಕ್ಕೆ ಏನು ಕ್ರಮ ತೆಗೆದು-ಕೊಂಡಿದ್ದೀರಿ ಎನ್ನುತಕ್ಕಂಥದ್ದು ಬಹಳ ಮುಖ್ಯ. ನೀವು ಲಿಫ್ಟ್ ಇರಿಗೇಷನ್‌ಗೆ

ಕ್ಕೆ ಹಾಕುವುದಕ್ಕಿಂತ ಮುಂಚಿತವಾಗಿ alternative ಆಗಿ ಇದಕ್ಕೆ ಬೇಕಾಗಿರುವ ಪವರ್ ಎಲ್ಲಿದೆ ಎಂದು ಮತ್ತು ಇದಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಮೊದಲೇ ತಯಾರು ಮಾಡಿಕೊಂಡರೆ ಮಾತ್ರ ಪ್ರಯೋಜನವಾಗುತ್ತದೆ ವಿನಹ ಇಲ್ಲದಿದ್ದರೆ ಇದು ಕೇವಲ ಮಾತಾಗುತ್ತದೆ. ದಯಮಾಡಿ ಇದರ ಕಡೆಗೆ ತಾವು ಗಮನವನ್ನು ಹರಿಸಬೇಕು. ೧೭ ಸಾವಿರ ಕೋಟಿ ರೂಪಾಯಿಯಲ್ಲಿ ಕೇವಲ ೩ ಸಾವಿರ ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಿದ್ದೀರಿ ಎಂದು ಮಾತನಾಡುವುದು ಬಹಳ ಸುಲಭ ಮತ್ತೆ ಇದು ಒಂದು ಪ್ರಶ್ನೆ ಕೂಡ ಅಲ್ಲ. ಇದರಲ್ಲಿ R&R ಗೆ ಮತ್ತು ಭೂಸ್ವಾಧೀನ ಕೂಡ ಸೇರಿದೆ. ಇವೆಲ್ಲಕ್ಕೂ ಇನ್ನೂ ಪ್ರಶ್ನೆ ಇದೆ. ಇದರ ಜೊತೆಗೆ ಪ್ರಮುಖವಾಗಿ ಇರತಕ್ಕಂಥದ್ದು ಏನೆಂದರೆ ಅದು ಪವರ್. ಆದ್ದರಿಂದ, ಇದಕ್ಕೆ ಎಷ್ಟು ಇನ್‌ವೆಸ್ಟ್‌ಮೆಂಟ್ ಮಾಡುತ್ತೀರಿ ಎಂಬುದು ಮತ್ತು ಎಷ್ಟು ಮೆ.ವ್ಯಾ. ಪವರ್ ಬೇಕಾಗುತ್ತದೆ ಎಂದು ಮತ್ತು ಇದನ್ನು ಎಲ್ಲಿ ಉತ್ಪಾದನೆ ಮಾಡುತ್ತೀರಿ ಹಾಗೂ ಇದಕ್ಕೆ ಎಷ್ಟು ಇನ್‌ವೆಸ್ಟ್‌ಮೆಂಟ್ ಮಾಡುತ್ತೀರಿ ಎಂಬುದು ಬಹಳ ಮುಖ್ಯವಾಗಿದೆ. ಅಲ್ಲಿಂದ ಚರ್ಚೆ ಪ್ರಾರಂಭ ಮಾಡಿದರೆ ಬಹಳ ಸುಲಭ-ವಾಗುತ್ತದೆ.

ಶ್ರೀ ಸಿದ್ಧರಾಮಯ್ಯ :- ಈ ಒಂದು ಕಾರಣಕ್ಕಾಗಿಯೇ ನಾನು ಹೇಳಿದ್ದೇನೆ. ಪವರ್ ಅನ್ನು ನಾವು ಒದಗಿಸಿಬೇಕಾದರೆ ಈ ಕೆಲಸ ಕೂಡ simultaneously ಆಗಬೇಕು. ನೀವು ೫ ವರ್ಷದೊಳಗೆ ಮಾಡುತ್ತೇವೆಂದರೆ 5 ವರ್ಷದೊಳಗೆ ಇಷ್ಟು ಮೆ.ವ್ಯಾ. ಪವರ್ ಅನ್ನು ಉತ್ಪಾದನೆ ಮಾಡುತ್ತೇವೆಂದು ಮತ್ತು ಇದಕ್ಕೆ ಬೇಕಾದಂಥ ಲೈನಿಂಗ್ ಮತ್ತು ಪವರ್ ಟ್ರಾನ್ಸ್‌ಮಿಷನ್ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ನಿರಂತವಾಗಿ ೨೪ ಗಂಟೆಗಳ ಕಾಲ ಪವರ್ ಸಿಗುವಂತೆ ಮಾಡುತ್ತೇವೆ. ಅಫ್ಟ್ ಇರಿಗೇಷನ್‌ಗೆ ಈ ತರಹ ೪-೫ ೬ ಗಂಟೆ ಪವರ್ ಕೊಡುವುದಕ್ಕೆ ಆಗುವುದಿಲ್ಲ. ೨೪ ಗಂಟೆಗಳ ಕಾಲ ಕರೆಂಟ್ ಕೊಡುವಂತಾಗಬೇಕು. ಅದಕ್ಕೆ ಎಷ್ಟು ಮೆ.ವ್ಯಾ. ಪವರ್ ಬೇಕಾಗುತ್ತದೆ. ಅದಕ್ಕೆ ಏನು ಸಿದ್ಧತೆಗಳು ಬೇಕಾಗಿದೆಯೋ ಅದನ್ನು ಮಾಡಿಕೊಳ್ಳಬೇಕು. ಏಕೆಂದರೆ, ಈಗ ನಮ್ಮ ಹತ್ತಿರ ಪವರ್ ಇಲ್ಲ. ಆದುದರಿಂದ ಪವರ್ ಜೆನರೇಟ್ ಮಾಡಬೇಕಾಗಿದೆ. ಈಗ ನಮಗೆ ಪವರ್

ಶಾರ್ಜ್ ಇದೆ. ಪವರ್ ಎಲ್ಲಿದೆ ಎಂಬುದರ ಬಗ್ಗೆ ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಆದುದರಿಂದ ನಾನು ಹೇಳುವುದೇನೆಂದರೆ, ಮೊದಲು ಇದಕ್ಕೆ ಸಮಗ್ರವಾಗಿ ಚಿಂತನೆ ಮಾಡಿ simultaneously ಈ ಎಲ್ಲ ಕೆಲಸಗಳು ಕೂಡ ಪ್ರಾರಂಭವಾಗಬೇಕು. ಟೈಂ ಬೌಂಡ್ ಅನ್ನು ೩, ೪, ೫ ವರ್ಷ ಇಟ್ಟುಕೊಳ್ಳುತ್ತೀರಾ? ೫ ವರ್ಷ ಇಟ್ಟುಕೊಂಡರೆ ೫ ವರ್ಷದೊಳಗೆ ಈ ಎಲ್ಲ ಕೆಲಸ ಕೂಡ ಅಂದರೆ, ಇದರ connected ಕೆಲಸವೆಲ್ಲಾ ಮುಗಿಯಬೇಕು. ಇದು ಆದರೆ ಮಾತ್ರ ಆ ಭಾಗದ ಜನರಿಗೆ ನ್ಯಾಯ ಒದಗಿಸಿದಂತೆ ಆಗುತ್ತದೆ. ನೀರು ಕೊಟ್ಟಂತೆ ಆಗುತ್ತದೆ. ಹಾಗೆಯೇ ಬಹಳ ವರ್ಷಗಳಿಂದ ಕಾಯುತ್ತಿದ್ದ ಆ ಜನರಿಗೆ ನ್ಯಾಯ ಕೊಟ್ಟಂತೆ ಆಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಈಗಾಗಲೇ ೪೮ ವರ್ಷಗಳಾಗಿಹೋಗಿದ್ದು ಇನ್ನು ೨೦ ವರ್ಷಗಳಾಗಿಬಿಟ್ಟರೆ ಜನ ನಮ್ಮ ಮೇಲಿನ ವಿಶ್ವಾಸವನ್ನು ಕಳೆದುಕೊಂಡು ಬಿಡುತ್ತಾರೆ. ಮತ್ತೆ ನಮ್ಮ ಮೇಲಿನ ನಂಬಿಕೆ ಕೂಡ ಹೋಗಿಬಿಡುತ್ತದೆ. ನಾವು ರಾಜಕಾರಣಕ್ಕೆ ಏನೋ ಒಂದು ಮಾತನ್ನು ಹೇಳಬಹುದು, ಆ ವಿಚಾರ ಬೇರೆ. ಆದರೆ, ಆತ್ಮಪೂರ್ವಕವಾಗಿ ಅದನ್ನು ಮಾಡಿ ಮುಗಿಸಲೇಬೇಕು. ಏಕೆಂದರೆ ಇದು ಅತ್ಯಂತ ಅವಶ್ಯಕತೆ ಆಗಿರತಕ್ಕದ್ದು. ಇದಕ್ಕೆ ಮೊದಲ ಆದ್ಯತೆ ಕೊಡೋಣ. ಬೇಕಾದರೆ ಬೇರೆ ಯಾವುದಕ್ಕಾದರೂ ಕೊಡಬೇಕಾಗಿರುವ ಹಣವನ್ನು ನಿಲ್ಲಿಸಿ ಇದನ್ನು ಮಾಡೋಣ ಎನ್ನುತಕ್ಕಂಥ ಒಂದು ಗಟ್ಟಿಯಾದಂಥ ನಿಲುವನ್ನು ಸರ್ಕಾರ ತೆಗೆದುಕೊಂಡರೆ ಮಾತ್ರ ಇದನ್ನು ಮಾಡುವುದಕ್ಕೆ ಸಾಧ್ಯ. ಅದಕ್ಕೋಸ್ಕರವೇ ನಾನು ರಾಜಶೇಖರ ರೆಡ್ಡಿಯವರನ್ನು ಉದಾಹರಣೆಯನ್ನು ಕೊಟ್ಟಿದ್ದೇನೆ ಒಂದು ಲಕ್ಷ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ಅವರು ಘೋಷಣೆ ಮಾಡಿದ್ದರು. ಆದರೆ,ಒಂದು ಲಕ್ಷ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆಯೋ ಅಥವಾ ಇಲ್ಲವೋ ಎಂಬುದು ಗೊತ್ತಿಲ್ಲ. ಆದರೆ, ಅವರು ಘೋಷಣೆ ಮಾಡಿ ೬೩ ಅಥವಾ ೬೫ ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿದರು ಎನ್ನುತಕ್ಕಂಥದ್ದು ನನ್ನ ಹತ್ತಿರ ಇರುವ ಮಾಹಿತಿ. ಆದರೆ, ಅವರು ೫ ವರ್ಷದಲ್ಲಿ ೧ ಲಕ್ಷ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ಹೇಳಿದರು. ಈಗ ನಮ್ಮಲ್ಲಿ ಕೂಡ resource ಗೆ ಏನೂ ತೊಂದರೆ ಇಲ್ಲ. ನಮ್ಮ ಹತ್ತಿರ ವರ್ಷಕ್ಕೆ ೧ ಲಕ್ಷ ಕೋಟಿ ಬಜೆಟ್ ಇದೆ. ಇದರಲ್ಲಿ ೧೦%

ಇಟ್ಟರೆ ೧೦,೦೦೦ ಕೋಟಿ ರೂಪಾಯಿ ಆಗುತ್ತದೆ. ಇವತ್ತು ಪ್ಲ್ಯಾನ್ ಸೈಜ್ ೩೮ ಸಾವಿರ ಕೋಟಿ ರೂಪಾಯಿ ಇದೆ. ಇದರಲ್ಲಿ ೨೦% ಇಟ್ಟರೆ ಸಾಕು. ಹಿಂದೆ ನೀರಾವರಿಗೆ ೨೯ ರಿಂದ ೩೦%ನಷ್ಟು ಪ್ಲ್ಯಾನ್ ಸೈಜ್‌ನಲ್ಲಿ ಇಡಲಾಗಿತ್ತು. Land acquisition proceedings, rehabilitation, power generation ಮತ್ತೆ ನಮ್ಮ ಡ್ಯಾಂ ಅನ್ನು ೫೧೯ ರಿಂದ ೫೨೪ Meters ಎತ್ತರಕ್ಕೆ ಏರಿಸತಕ್ಕಂಥದ್ದು ಹಾಗೆಯೇ ನೀರಿನಲ್ಲಿ ಮುಳುಗಡೆ ಆಗತಕ್ಕಂಥ ಪ್ರದೇಶಗಳ ಪುನರ್ವಸತಿಗೆ ಬೇಕಾದ ಎಲ್ಲ ಸಿದ್ಧತೆಗಳನ್ನು ಈಗಾಗಲೇ ಮಾಡಿಕೊಳ್ಳತಕ್ಕಂಥದ್ದು ಮತ್ತು ಅಲ್ಲಿ ಎಷ್ಟು ಕುಟುಂಬಗಳು ಬರುತ್ತವೆ ಎಂದು ನೋಡಿ ಅಲ್ಲಿನ ಜನರನ್ನು ಬೇರೆ ಕಡೆಗೆ ಶಿಫ್ಟ್ ಮಾಡಿ ಅವರಿಗೆ ಪುನರ್ವಸತಿ ಕಲ್ಪಿಸಬೇಕಾಗುತ್ತದೆ. ಅಲ್ಲಿ ಸುಮಾರು ೨೦ ಹಳ್ಳಿಗಳು ಮುಳುಗಡೆ ಆಗುತ್ತಿವೆ.

ಶ್ರೀ ವೀರಣ್ಣ ಚರಂತಿಮಠ್ :- ಮೂರನೇ ಸ್ಟೇಜ್‌ನಲ್ಲಿ ಬಾಗಲಕೋಟೆಯಲ್ಲಿ ೨೦ ಹಳ್ಳಿಗಳ ಜೊತೆಗೆ ಹೆಚ್ಚಿನ ಹಳ್ಳಿಗಳು ಮುಳುಗಡೆ ಆಗುತ್ತವೆ.

ಶ್ರೀ ಸಿದ್ದರಾಮಯ್ಯ :- ಬಾಗಲಕೋಟೆಯಲ್ಲಿಯೇ rehabilitation ಮಾಡಬೇಕಾಗುತ್ತದೆ. ಆದ್ದರಿಂದ, ಈಗ ನಾನು ಹೇಳುವುದೇನೆಂದರೆ, ಈಗಾಗಲೇ ಸಾಕಷ್ಟು ವಿಳಂಬವಾಗಿದೆ. ನಮ್ಮ ಮೇಲೆ ಜನರಲ್ಲಿ ವಿಶ್ವಾಸ ಹೋಗುತ್ತದೆ. ಹೇಳಿದ್ದನ್ನೇ ಮತ್ತೆ ಹೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇವೆಲ್ಲವನ್ನೂ ಅವರು ಕೇಳಿ ಕೇಳಿ ಸಾಕಾಗಿಬಿಟ್ಟಿದೆ. ವಿರೋಧ-ಪಕ್ಷದ ಕಡೆಯಿಂದ ತಮಗೆ ಏನೇನು cooperation ಬೇಕಾಗಿದೆಯೋ ಅವೆಲ್ಲವನ್ನು ಕೊಡುತ್ತೇವೆ. Whatever cooperation ruling party needs, ಅದನ್ನು ನಾವು ಕೊಡುತ್ತೇವೆ. ಇನ್ನು ಮೂರು ತಿಂಗಳು ಮಾತ್ರ ನಿಮಗೆ ಕಾಲ ಇದೆ. ಆಮೇಲೆ ನೋಡೋಣ. ಜನರು ಯಾರಿಗೆ ಆಶೀರ್ವಾದ ಕೊಡುತ್ತಾರೋ ಮತ್ತು ಇಲ್ಲಿಗೆ ಯಾರು ಬರುತ್ತಾರೋ ಎಂಬುದನ್ನು ಆನಂತರ ನೋಡೋಣ. ಈಗಲೇ ಅದನ್ನು ನಾವು predict ಮಾಡುವುದಕ್ಕೆ ಹೋಗುವುದಿಲ್ಲ. ಇನ್ನು ಮೂರು ತಿಂಗಳಲ್ಲಿ ಒಂದು ಈ ತರಹ ರೋಡ್ ಮ್ಯಾಪ್ ಮಾಡಿ

rehabilitation work, land acquisition work and power generation ಮತ್ತು ನಾಲೆಯನ್ನು ತೆಗೆಯುವಂಥ ಕೆಲಸವನ್ನು ಹಾಗೂ distributary ಮಾಡತಕ್ಕದ್ದು ಈ ಎಲ್ಲ ಒಂದು road map ಮಾಡಿ. ಮತ್ತೆ ಇದನ್ನು ಟೈಂ ಬೌಂಡ್ ಹಾಕಿಕೊಂಡು ಇವೆಲ್ಲವನ್ನೂ ಮಾಡಿ ಮುಗಿಸಲೇ ಬೇಕಾಗುವಂತೆ ಒಂದು road map ಮಾಡಿ. ಇದನ್ನು ಮಾಡುವುದರಿಂದ ಉತ್ತರ ಕರ್ನಾಟಕದ ಜನರಿಗೆ ನಾವು ನ್ಯಾಯ ಒದಗಿಸಿದಂತೆ ಆಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಇಲ್ಲಿನ ಜನರು ಈಗಾಗಲೇ ಅನ್ಯಾಯಕ್ಕೆ ಒಳಗಾಗಿದ್ದಾರೆ ಮತ್ತೆ ನಮ್ಮ ಮೇಲೆ ಅಲ್ಲಿನ ಜನರಿಗೆ ಬೇಸರವಾಗಿದೆ. ನಾವು ಮುಗಿಸುವುದಿಲ್ಲವೆಂಬ ವಿಶ್ವಾಸ ಬಂದಿದೆ. ಮಾನ್ಯ ಬೆಳ್ಳುಬ್ಬಿಯವರೆ ತಾವೇನು ಹೇಳುತ್ತೀರಿ? ನಿಮ್ಮ ಕಡೆ ಈ ರೀತಿಯಾಗಿ ಮಾತನಾಡುತ್ತಾರೆ ಅಲ್ಲವೇ?

ಶ್ರೀ ಎಸ್.ಕೆ.ಬೆಳ್ಳುಬ್ಬಿ :- ಡ್ಯಾಂ ಹೈಟ್ ಮಾಡಬೇಕಾಗಿಲ್ಲ.

ಶ್ರೀ ಸಿದ್ದರಾಮಯ್ಯ :- ನಾನು ಸರ್ಕಾರವನ್ನು criticize ಮಾಡುತ್ತಿಲ್ಲ.

ಶ್ರೀ ಎಸ್.ಕೆ.ಬೆಳ್ಳುಬ್ಬಿ :- ಡ್ಯಾಂ ಹೈಟ್ ಈಗಾಗಲೇ ಆಗಿದೆ. ೫೨೪ ಮೀ. ಇದ್ದ ಗೇಟ್ ಅನ್ನು ೫೧೯ ಮೀ.ಗೆ ಕಟ್ ಮಾಡಲಾಗಿದೆಯಷ್ಟೆ. ಡ್ಯಾಂ ಕಟ್ಟಡ ಈಗಾಗಲೇ ಆಗಿದೆ.

ಶ್ರೀ ಸಿದ್ದರಾಮಯ್ಯ :- ಕೆಲಸವಾದರೆ ಆ ಕಡೆ ನಿಮಗೆಲ್ಲ ಗೌರವ ಬರುತ್ತದೆ.

ಶ್ರೀ ಎಸ್.ಕೆ.ಬೆಳ್ಳುಬ್ಬಿ :- ಸರ್ಕಾರ ಕೆಲಸ ಮಾಡುತ್ತಿದೆ.

ಶ್ರೀ ಸಿದ್ದರಾಮಯ್ಯ :- ಆ ಕಡೆ ನಿಮಗೆ ಶಿಬ್ಬಿನ ತೊಂದರೆ ಇದೆ.

ಶ್ರೀ ಎಸ್.ಕೆ.ಬೆಳ್ಳುಬ್ಬಿ :- ನನ್ನ ಕ್ಷೇತ್ರದಲ್ಲಿ ಮುಳವಾಡ ಮತ್ತು ಚಿಮ್ಮಲಗಿ ಏತ ನೀರಾವರಿಯ ಒಟ್ಟು ೫ ಜಾಕ್‌ವೆಲ್‌ಗಳು ಇವೆ.

ಶ್ರೀ ಸಿದ್ದರಾಮಯ್ಯ :- ಆಲಮಟ್ಟಿ ನಿಮ್ಮ ಕ್ಷೇತ್ರಕ್ಕೆ ಬರುತ್ತದೆ ಅಲ್ಲವೆ?

ಶ್ರೀ ಎಸ್.ಕೆ.ಬೆಳ್ಳುಬ್ಬಿ :- ಆಲಮಟ್ಟಿ ಮತ್ತು ೫ ಜಾಕ್‌ವೆಲ್‌ಗಳು ಮೂರು ಏತ ನೀರಾವರಿ ಕಾಮಗಾರಿಗಳು ನನ್ನ ಕ್ಷೇತ್ರಕ್ಕೆ ಬರುತ್ತದೆ.

ಶ್ರೀ ಸಿದ್ದರಾಮಯ್ಯ :- ಹಾಗಾದರೆ ನೀವು ಇವರಿಗೆ ಜೋರು ಮಾಡಬೇಕು.

ಶ್ರೀ ಎಸ್.ಕೆ.ಬೆಳ್ಳುಬ್ಬಿ :- ಜೋರು ಮಾಡುತ್ತೇವೆ. ನಮ್ಮ ಸರ್ಕಾರ ಎಲ್ಲ ಕೆಲಸವನ್ನು ಮಾಡುತ್ತಿದೆ. ಸನ್ಮಾನ್ಯ ಬಸವರಾಜ್ ಬೊಮ್ಮಾಯಿರವರು ನೀರಾವರಿ ಸಚಿವರಾದ ಮೇಲೆ ಎಲ್ಲ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ.

SRI SIDDAARAMAIAH :- Are you happy?

ಶ್ರೀ ಎಸ್.ಕೆ.ಬೆಳ್ಳುಬ್ಬಿ :- ನಮ್ಮ ಜನ happy ಆಗಿದ್ದಾರೆ.

ಶ್ರೀ ಸಿದ್ದರಾಮಯ್ಯ :- ಇನ್ನು ಪವರ್ ಜನರೇಟ್ ಮಾಡುತ್ತಿಲ್ಲ. How are you happy?

ಶ್ರೀ ಎಸ್.ಕೆ.ಬೆಳ್ಳುಬ್ಬಿ :- ಕೂಡಗಿ ಹತ್ತಿರ ಕೇಂದ್ರ ಸರ್ಕಾರದ NTPC ಯಿಂದ ೩೫೦೦ ಎಕರೆ ಸ್ವಾಧೀನ ಮಾಡಿ ೪೦೦೦ ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುವ ಯೋಜನೆ ಪ್ರಾರಂಭವಾಗಿದೆ. ೨ ವರ್ಷದಲ್ಲಿ ೮೦೦ ಮೆ.ವ್ಯಾ. ವಿದ್ಯುತ್ ಉತ್ಪಾದನೆ ಆಗುವುದಕ್ಕೆ ತಯಾರಿದೆ.

ಶ್ರೀ ಸಿದ್ದರಾಮಯ್ಯ :- ನಿಮ್ಮ ಸರ್ಕಾರ ಇದೆ ಎಂದು ತಾವು ಹೇಳುವುದನ್ನು ನೋಡಿದರೆ ಹೆತ್ತವರಿಗೆ ಹೆಗ್ಗಣ ಮುದ್ದು ಎನ್ನುವ ರೀತಿಯಲ್ಲಿ ತಾವು ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಸ್.ಕೆ.ಬೆಳ್ಳುಬ್ಬಿ :- ಇಲ್ಲ. ತಾವು ಬಂದು NTPC ಮಾಡುತ್ತಿರುವ ಕಾಮಗಾರಿಯನ್ನು ನೋಡಬಹುದು. NTPC ಕಾಮಗಾರಿ ಬಹಳ ಸ್ಪೀಡ್ ಆಗಿ ಆಗುತ್ತಿದೆ.

ಶ್ರೀ ಸಿದ್ದರಾಮಯ್ಯ :- ನಾನು ಬಂದು ನೋಡಿಯೇ ಈ ಎಲ್ಲ ವಿಷಯವನ್ನು ಹೇಳುತ್ತಿದ್ದೇನೆ. ಬರಗಾಲ ಇದ್ದಂಥ ಸಂದರ್ಭದಲ್ಲಿ ನಾನು ನಿಮ್ಮ ಕ್ಷೇತ್ರದ ಊರಿಗೆ ಹೋಗಿದ್ದೆ. ಕುಡಿಯುವುದಕ್ಕೆ ನೀರಿಲ್ಲವೆಂದು ಒಬ್ಬ ಹೆಣ್ಣು ಮಗಳು ಗೊಳೋ ಎಂದು ಅತ್ತುಬಿಟ್ಟಳು.

ಶ್ರೀ ಎಸ್.ಕೆ.ಬೆಳ್ಳುಬ್ಬಿ :- ಅದು ಸುಳ್ಳು. ಇಡೀ ರಾಜ್ಯದಲ್ಲಿ ಎಲ್ಲೂ ಮಾಡದಂಥ ಕೆಲಸವನ್ನು ನನ್ನ ಕ್ಷೇತ್ರದಲ್ಲಿ ಮಾಡಲಾಗಿದೆ. ನೀವು ಬಂದಾಗ ಏನಾಯಿತೆಂದು ನನಗೆ ಗೊತ್ತಾಯಿತು. ಯಾರೋ ಒಬ್ಬರು ಬಂದು ತೋರಿಸಿದ್ದಾರೆ. ನನ್ನ ಕ್ಷೇತ್ರದ ೮೦ ಹಳ್ಳಿಗಳಿಗೆ ಬಹುಹಳ್ಳಿ ಯೋಜನೆ ಅಡಿಯಲ್ಲಿ ಕುಡಿಯವ ನೀರನ್ನು ಕೊಟ್ಟು ನಾಲ್ಕು ವರ್ಷವಾಗಿದೆ. ಒಂದೂ ಟ್ಯಾಂಕ್ ರಚನೆ ಆಗಿಲ್ಲ.

ಶ್ರೀ ಸಿದ್ದರಾಮಯ್ಯ :- ಹಾಗಾದರೆ ನಾನು ಸುಳ್ಳು ಹೇಳುತ್ತಿದ್ದೇನೆಯೇ?

ಶ್ರೀ ಎಸ್.ಕೆ.ಬೆಳ್ಳುಬ್ಬಿ :- ನನಗೆ ಗೊತ್ತಿದೆ. ಒಬ್ಬ ಹೆಣ್ಣು ಮಗಳು ನಾಟಕ ಮಾಡುವುದಕ್ಕೆ ತಂದು ನಿಮಗೆ ತೋರಿಸಿದ್ದಾಳೆ. ಮುತ್ತಗಿ ಗ್ರಾಮದಲ್ಲಿ ಶುದ್ಧವಾದ ಕುಡಿಯುವ ನೀರನ್ನು ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : ನಾನು ನಿಮ್ಮ ಕ್ಷೇತ್ರಕ್ಕೆ ಹೋಗಿದ್ದೆ, ಏನು ನೀವು ಜಗಳಕ್ಕೆ ಬರುವವರ ತರಹ ಬರುತ್ತಿದ್ದೀರಲ್ಲಾ. ಆಯಿತು ಕುಳಿತುಕೊಳ್ಳಿ.

ಶ್ರೀ ಎಸ್.ಕೆ.ಬೆಳ್ಳುಬ್ಬಿ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ೨೦೦೩ ರಿಂದ ಅಪ್ರೂವ್ ಮಾಡಿರತಕ್ಕಂಥ Multi Village Scheme ನನ್ನ ಕ್ಷೇತ್ರಕ್ಕೆ ಮೊದಲು ಪ್ರಾರಂಭವಾಗಿರುವುದು. ಈಗ ೮೦ ಹಳ್ಳಿಗಳಿಗೆ ನಾವು ಕುಡಿಯುವುದಕ್ಕೆ ನೀರು ಕೊಡುತ್ತಿದ್ದೇವೆ. ಇಂತಹ ಬರಗಾಲ ಸಮಯದಲ್ಲಿ ಒಂದು ಟ್ಯಾಂಕರನ್ನು ಕೂಡ ನಾವು ಕುಡಿಯುವ ನೀರಿನ ಸಲುವಾಗಿ ಹಚ್ಚಿರುವುದಿಲ್ಲ.

ಶ್ರೀ ಸಿದ್ದರಾಮಯ್ಯ : ನಾವು ಹೋಗಿರುವ ಹಳ್ಳಿಯಲ್ಲಿ ಕುಡಿಯುವ ನೀರು ಕೊಟ್ಟಿರಲಿಲ್ಲ ಅಷ್ಟೆ.

ಶ್ರೀ ಎಸ್.ಕೆ.ಬೆಳ್ಳುಬ್ಬಿ : ನೀವು ಹೋಗಿರುವುದು ಮುತ್ತಗಿ ಗ್ರಾಮ.

ಶ್ರೀ ಸಿದ್ದರಾಮಯ್ಯ : ನೀವು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲವಲ್ಲ.

ಶ್ರೀ ಎಸ್.ಕೆ.ಬೆಳ್ಳುಬ್ಬಿ : ಅದು ಸುಳ್ಳು ಸರ್.

ಶ್ರೀ ಸಿದ್ದರಾಮಯ್ಯ : It is a fact. ನಾನು ಪ್ರಸ್‌ನವರನ್ನೆಲ್ಲಾ ಕರೆದುಕೊಂಡು ಹೋಗಿದ್ದೆ.

ಶ್ರೀ ಎಸ್.ಕೆ.ಬೆಳ್ಳುಬ್ಬಿ : ಸುಮ್ಮನೆ ಒಂದು ನಾಟಕ ಮಾಡುವುದಕ್ಕೆ ಕರೆದುಕೊಂಡು ಬಂದಿದ್ದಾರೆ. ಇವತ್ತು ನೀವು ಬನ್ನಿ ಸರ್. ನಾನು ನಿಮ್ಮನ್ನು ವೆಲ್‌ಕಂ ಮಾಡುತ್ತೇನೆ.

ಶ್ರೀ ಮುರುಗೇಶ್ ಆರ್.ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಬರತಕ್ಕಂಥ ಕೂಡಗಿಯಲ್ಲಿ ೪೦೦೦ ಮೆಗಾ-ವ್ಯಾಟ್ ವಿದ್ಯುತ್ ಉತ್ಪಾದನೆಯನ್ನು ಮಾಡಲಾಗುತ್ತದೆ. ಇದನ್ನು ೨೦,೦೦೦ ಕೋಟಿ ರೂ. ಗಳಲ್ಲಿ ೩೦೦೦ ಎಕರೆ ಜಮೀನನ್ನು aquire

ಮಾಡಿಕೊಂಡು ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದ್ದು ಇದ್ದರೂ ಸಹಿತ ನಮ್ಮ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯ ಕೆಲವು ಪ್ರಮುಖರು ಇಲ್ಲಿ ವಿದ್ಯುತ್ ಉತ್ಪಾದನೆ ಮಾಡುವುದು ಬೇಡವೆಂದು ೧೫ ದಿವಸದವರೆಗೆ ಪ್ರತಿಭಟನೆ ಮಾಡಿದರು. ಅಲ್ಲಿರುವಂಥ ರೈತರು ಹೇಳಿದರು. ಇಲ್ಲಿಗೆ ಲಕ್ಷಾಂತರ ಎಕರೆ ಜಮೀನಿಗೆ ನೀರಾವರಿ ಬರುತ್ತಿದೆ. ಈಗ ೭ ತಾಸು ೩ ಫೇಸ ವಿದ್ಯುತ್ ಕೊಡುವುದಕ್ಕೆ ಮಾತ್ರ ಅವಕಾಶ ಇದೆ. ೧೨ ತಾಸು ಸಿಂಗಲ್ ಫೇಸ್ ಕೊಡುವುದಕ್ಕೆ ಪವರ್ ಇಲ್ಲ. ಅದಕ್ಕಾಗಿ ೪೦೦೦ ಮೆಗಾವ್ಯಾಟ್ ವಿದ್ಯುತ್ ಬರುತ್ತಿರುವುದರಿಂದ ನಮ್ಮ ರೈತರಿಗೆ ಅನುಕೂಲವಾಗುತ್ತಿದೆ, ದಯವಿಟ್ಟು ಸ್ಟ್ರೈಕ್ ಮಾಡಬೇಡಿ ಎಂದು ಹೇಳಿ ಶಾಲೆಯನ್ನು ಕಲಿಯದಿರುವ ರೈತರು ಅವರ ಮೇಲೆ ತಿರುಗಿ ಬಿದ್ದಾಗ ಎಲ್ಲಾ ರೈತರು ೩೦೦೦ ಎಕರೆ ಜಮೀನನ್ನು ಸ್ವ ಇಚ್ಛೆ ಇಂದ ಕೊಟ್ಟರು. ಆದರೆ ನಮ್ಮ ಬಾಗಲಕೋಟೆ-ಬಿಜಾಪುರ ಜಿಲ್ಲೆಯ ಕೆಲವು ಪ್ರಮುಖರು ೧೫ ದಿವಸದಿಂದ ಕೂಡಗಿಯಿಂದ ಕೂಡಲಸಂಗಮದವರೆಗೆ ಪಾದಯಾತ್ರೆಯನ್ನು ಮಾಡಿ ವಿರೋಧ ಮಾಡಿದರು. ನಮ್ಮ ಪ್ರಮುಖರು ಯಾರು ವಿರೋಧ ಮಾಡುತ್ತಾರೆ, ಅವರಿಗೆ ನಾನು ವಿನಂತಿಯನ್ನು ಮಾಡುತ್ತೇನೆ. ಅವರು ಅಭಿವೃದ್ಧಿ ಕೆಲಸಗಳಿಗೆ ಸಹಕಾರವನ್ನು ಮಾಡಿದರೆ ಬೇಗ ಎಲ್ಲಾ ಕೆಲಸಗಳಲ್ಲಿ ಅಭಿವೃದ್ಧಿಯನ್ನು ಮಾಡುವುದಕ್ಕೆ ಸಾಧ್ಯವಿದೆ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಇಬ್ಬರು ಸಚಿವರುಗಳು ಉತ್ತರ ಕೊಡುವ ಸಂದರ್ಭದಲ್ಲಿ ಹೇಳುತ್ತಿದ್ದರು. ಬಸವನ ಬಾಗೇವಾಡಿ ತಾಲ್ಲೂಕಿನ ಕೂಡಗಿಯಲ್ಲಿ ೪೦೦೦ ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡುತ್ತೇವೆಂದು ಹೇಳುತ್ತಿದ್ದರು. ನಾನು ಈ ಸರ್ಕಾರಕ್ಕೆ ಕೇಳುವುದಕ್ಕೆ ಬಯಸುತ್ತೇನೆ. ಮೂರು ಜನ ಮಂತ್ರಿಗಳು ಇಲ್ಲಿಯೇ ಇದ್ದಾರೆ. ರಾಜ್ಯ ಸರ್ಕಾರ ಏನಾದರೂ Central Government Scheme ನಲ್ಲಿ ಏನು ವಿದ್ಯುತ್ ಉತ್ಪಾದನೆ ಆಗುತ್ತಿದೆ, ನಾನು ಎರಡು ಸಲ ಇದರ ಬಗ್ಗೆ ಹೋರಾಟ ಮಾಡುವಂಥ ಸಂದರ್ಭದಲ್ಲಿ ಸರ್ಕಾರಕ್ಕೆ ನಾನು ಏನೆಂದು ಆಗ್ರಹ ಮಾಡಿರುತ್ತೇನೆಂದರೆ, ಏನು ವಿದ್ಯುತ್ ಉತ್ಪಾದನೆ ಆಗುತ್ತದೆ, ಅದನ್ನು ಬಿಜಾಪುರ ಜಿಲ್ಲೆಯ ಏತ

ನೀರಾವರಿಯೊಳಗಡೆ ಕಂಪಲ್ಸರಿ ರಾಜ್ಯ ಸರ್ಕಾರ ಕೊಡುತ್ತದೆಂದು ಹೇಳಿ ಏನಾದರೂ ಒಡಂಬಡಿಕೆ ಮಾಡಿಕೊಂಡಿದ್ದಾರಾ? ಏಕೆಂದರೆ ರೈತರ ಬಗ್ಗೆ ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ನಾವು ಹೋರಾಟ ಮಾಡಿದ್ದು ನಿಜ. ಅಲ್ಲಿರತಕ್ಕಂಥ ಅನೇಕ ಜನ ನಾಯಕರು ಅಲ್ಲಿ ಎನ್.ಟಿ.ಪಿ.ಸಿ. ಬರುತ್ತಿದೆ, ಅದಕ್ಕಾಗಿ ರಾಜ್ಯ ಸರ್ಕಾರ ಕಣ್ಣು ತೆರೆಯಬೇಕು, ಬಿಜಾಪುರ ಜಿಲ್ಲೆಯ ಎಲ್ಲಾ ನೀರಾವರಿ ಯೋಜನೆಗಳಿಗೆ ವಿದ್ಯುತ್ ಅನ್ನು ಕಂಪಲ್ಸರಿಯಾಗಿ ಕೊಡಬೇಕು ಎನ್ನುವ ಒಡಂಬಡಿಕೆ ಆಗಬೇಕು ಮತ್ತು ಆ ಜಿಲ್ಲೆಗೆ ಇಡೀ ೨೪ ಗಂಟೆಯೂ ವಿದ್ಯುತ್‌ನ್ನು ಕೊಡಬೇಕು. ಆ ರೀತಿಯಾಗಿ ನೀವು ಮಾಡುವುದಾದರೆ ನಾವು ಒಪ್ಪಿಗೆ ಕೊಡುತ್ತೇವೆ, ಇಲ್ಲವಾದರೆ ನಾವು ಹೋರಾಟ ಮಾಡುತ್ತೇವೆಂಬ ಮಾತುಗಳನ್ನು ನಾವು ಹೇಳಿದ್ದೆವು. ಆದರೆ ಇವತ್ತು ಆ ಹೋರಾಟವನ್ನು ಟೀಕೆ ಮಾಡತಕ್ಕಂಥ ಸಚಿವರಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ. ರಾಜ್ಯ ಸರ್ಕಾರದಿಂದ ಆ ರೀತಿ ಒಡಂಬಡಿಕೆ ಮಾಡಿಕೊಂಡಿದ್ದೀರಾ? ನೀವು ಮಾಡಿಕೊಂಡಿದ್ದರೆ ನಾವು ಸ್ವಾಗತ ಮಾಡುತ್ತೇವೆ. ಇಲ್ಲದಿದ್ದರೆ ನಮ್ಮ ಹೋರಾಟವನ್ನು ನಾವು ಮುಂದುವರೆಸುತ್ತೇವೆ.

ಶ್ರೀ ಮುರುಗೇಶ್ ಆರ್.ನಿರಾಣಿ : ಮಾನ್ಯ ಅಧ್ಯಕ್ಷರೆ, ಯಾವುದೋ ಒಂದು ಉತ್ಪಾದನೆ ಮಾಡುತ್ತಿರುವಾಗ ಅದೇ ಜಿಲ್ಲೆಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯಲ್ಲಿ ವಿದ್ಯುತ್ ಉತ್ಪಾದನೆ ಮಾಡುತ್ತಿಲ್ಲ. ರಾಯಚೂರಿನಲ್ಲಿ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದಾರೆ ಅವರು ನಮಗೂ ಕೊಡುತ್ತಿದ್ದಾರೆ. ಇವತ್ತು ಬಿಜಾಪುರ ಜಿಲ್ಲೆ ಕೂಡಗಿಯಲ್ಲಿ ೪೦೦೦ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಿದಾಗ ಸರಿಸಮನವಾಗಿ ನಾವು ಎಲ್ಲರಿಗೂ ಕೊಡಬೇಕಾಗುತ್ತದೆ. ಇದರಲ್ಲಿ ೪೦% ಪಾಲು ಕರ್ನಾಟಕ ರಾಜ್ಯದ್ದು ಇದೆ. ಇದರಲ್ಲಿ ನಮಗೆ ಜಿಲ್ಲಾವಾರು ಪಾಲು ಸಿಕ್ಕೇ ಸಿಗುತ್ತದೆ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಮಾನ್ಯ ಅಧ್ಯಕ್ಷರೆ, ನೀವು (ಮಾನ್ಯ ಸಚಿವರು) ಆ ರೀತಿ ಹೇಳಿರುವುದಕ್ಕೆ ನಾನು ಪ್ರಶ್ನೆ ಮಾಡ-ಬೇಕಾಯಿತು. Central Govt. in General ಆಗಿ ಮಾಡಿದಂತಹ ಪ್ರಾಜೆಕ್ಟ್

ಅದನ್ನು ಇಟ್ಟುಕೊಂಡು ನೀವು ರೈತರಿಗೆ ವಿದ್ಯುತ್ ಕೊಡುತ್ತೇವೆಂದು ಏಕೆ ಸುಳ್ಳು ಹೇಳುತ್ತಿದ್ದೀರಿ.

(ಗೊಂದಲ)

9. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ : ಸದಾಶಿವ ಆಯೋಗದ ವರದಿ ಜಾರಿಗೆ ತರುವ ಸಲುವಾಗಿ ಸುವರ್ಣ ಸೌಧದ ಮುಂದೆ ಹೋರಾಟವಾಗಿ ಫೈರಿಂಗ್ ಆಗುತ್ತಿರುವ ಬಗ್ಗೆ

ಶ್ರೀ ಟಿ.ಬಿ.ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ಸುವರ್ಣ ವಿಧಾನ ಸೌಧದ ಮುಂದೆ ಫೈರಿಂಗ್ ಆಗುತ್ತಿದೆ. ಸದಾಶಿವ ಆಯೋಗವನ್ನು ಜಾರಿಗೆ ತರುವ ಸಲುವಾಗಿ ಕೇಳಲು ಬಂದಿರುವ ಅಮಾಯಕ ಜನಗಳ ಮೇಲೆ ಫೈರಿಂಗ್ ಆಗುತ್ತಿದೆ. ಮಾನ್ಯ ಗೃಹ ಸಚಿವರು ಇಲ್ಲಿಯೇ ಇದ್ದಾರೆ. ಅವರಿಗೆ ಈ ವಿಷಯ ಗೊತ್ತಿದೆಯೋ ಅಥವಾ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಗೊತ್ತಿಲ್ಲದಿದ್ದರೆ ದಯಮಾಡಿ ಈಗಲಾದರೂ ವರ್ತಮಾನವನ್ನು ತಿಳಿದುಕೊಳ್ಳಿ. ಏನಾಗಿದೆ ಎಂದು ಆ Tear Gas ಹಾಕಿದಿರಿ? ರೈತರ ಮೇಲೆ ಗೋಲಿಬಾರ್ ಮಾಡುವಂಥ ಕೆಲಸ ಆಯಿತು. ಗೋಲಿಬಾರ್ ಮಾಡಿ Tear Gas ಮಾಡಿರುವುದರಿಂದ ಎಸ್‌ಪಿ ಯವರ ತಲೆಗೆ ಗಾಯವಾಗಿದೆ ಎಂದು ವರ್ತಮಾನ ಬರುತ್ತಿದೆ. ದಯಮಾಡಿ ಏನಾಗಿದೆ, ಸರ್ಕಾರದ ನಿಲುವು ಏನು? ಸದಾಶಿವ ಆಯೋಗದ ವರದಿ ಸಲ್ಲಿಕೆಯಾಗಿದ್ದು, ಅದು ನಿಮ್ಮ ಮುಂದೆ ಇದೆ, ಅದನ್ನು ಜಾರಿಗೆ ತರುವುದಕ್ಕೆ ನಾವು ಹೋದ ಸಲವು ಒತ್ತಾಯವನ್ನು ಮಾಡಿದ್ದೆವು. ಆ ಆಯೋಗದಲ್ಲಿ ಇರತಕ್ಕಂಥ ಅಂಶಗಳು ಏನು ಎನ್ನುವುದರ ಬಗ್ಗೆ ಸಭೆಗೆ ಮಂಡನೆ ಮಾಡಿ ಎನ್ನುವಂಥದ್ದನ್ನು ಹೇಳಿದ್ದೇವೆ. ಅದರ ಪರ ಮತ್ತು ವಿರೋಧದ ಹೋರಾಟಗಳು ಇವತ್ತು ನಡೆಯುತ್ತಿವೆ. ಇವತ್ತು ರಾಜ್ಯದಾದ್ಯಂತ, ಜಿಲ್ಲಾ, ತಾಲ್ಲೂಕು, ಗ್ರಾಮಗಳಲ್ಲಿ ಈ ಪಿಡುಗಿನ ಬಗ್ಗೆ ಹೋರಾಟ ನಡೆಯುತ್ತಿದೆ. ಆದಾಗ್ಯೂ ಸರ್ಕಾರ ಯಾವ ರೀತಿಯಲ್ಲಿಯೂ ಬಾಯಿ ಬಿಡದೆ ಗುಂಡುಕಲ್ಲಿನ ರೀತಿಯಲ್ಲಿ ಕುಳಿತುಕೊಂಡರೆ ಏನು ಆಗುತ್ತದೆ ಹೇಳಿ? ದಯಮಾಡಿ ಇದಕ್ಕೊಂದು ಏನಾದರೂ ಖಚಿತವಾದ ನಿಲುವು ಆಗಬೇಕು.